# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ–577007

## ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು

## ದಿನಾಂಕ:29.02.2024

# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ-577007
ದೂರವಾಣಿ ಸಂಖ್ಯೆ: 08192-208029, ಫ್ಯಾಕ್ಸ್ ಸಂಖ್ಯೆ: 08192-208008

ಃ ವಿದ್ಯಾದಾನೇನ ವರ್ಧತೆ, ವಿದ್ಯಾ ವಿನಯೇನ ಶೋಭತೆ, ವಿದ್ಯಯಾ ವಿಂಧತೆ ಅಮಅಮೃತಂ ಃ

ಸಂಖ್ಯೆ:ದಾವಿವಿ/ಪ್ರಾಧಿಕಾರ/ಸಿಂ/234/2023-24/ 4694 ದಿನಾಂಕ:02.03.2024

ಇವರಿಗೆ,

ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ.

ಮಾನ್ಯರೆ,

ವಿಷಯ : ದಿನಾಂಕ:29.02.2024 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು.

****

ವಿಶ್ವವಿದ್ಯಾನಿಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು ಅಧ್ಯಾಯ – III ರ ಪ್ರಕರಣ 16 (i) ರ ರೀತ್ಯ ದಿನಾಂಕ:29.02.2024 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಈ ಮೂಲಕ ತಮಗೆ ಕಳುಹಿಸಲಾಗಿದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000 ರಡಿ ರಚಿಸಲಾಗಿರುವ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು – ಅಧ್ಯಾಯ–III ರ ಪ್ರಕರಣ 16 (i) ರ ರೀತ್ಯ ನಡಾವಳಿ ತಲುಪಿದ ಏಳು ದಿನಗಳೊಳಗಾಗಿ ತಮ್ಮಿಂದ ನಡಾವಳಿಗಳ ದಾಖಲಾತಿಯ ಬಗ್ಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಡಾವಳಿಗಳ ದಾಖಲಾತಿಯು ಸರಿಯಾಗಿದೆಯೆಂದು ಭಾವಿಸಲಾಗುವುದು.

ತಮ್ಮ ವಿಶ್ವಾಸಿ,

2/3/2024
ಕುಲಸಚಿವರು
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ-577007

ಪ್ರತಿಗಳು:

1. ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು-560 001.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು- 560 001.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು), ಬಹುಮಹಡಿಗಳ ಕಟ್ಟಡ, ಬೆಂಗಳೂರು
4. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
5. ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೆ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
6. ಕುಲಸಚಿವರು (ಪರೀಕ್ಷಾಂಗ), ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
7. ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
8. ನಿಕಾಯಗಳ ಡೀನರುಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
9. ಗ್ರಂಥಪಾಲಕರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
10. ಕಾರ್ಯನಿರ್ವಾಹಕ ಇಂಜಿನಿಯರ್, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
11. ಉಪಕುಲಸಚಿವರು, ಶೈಕ್ಷಣಿಕ/ಮಾಸನಿ/ಅಭಿವೃದ್ಧಿ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
12. ನಿರ್ದೇಶಕರು, ಸಿ.ಡಿ.ಸಿ/ಐಕ್ಯೂಎಸಿ/ಪಿ.ಎಂ.ಇ./ದೈಹಿಕ ಶಿಕ್ಷಣ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
13. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ, ದೃಶ್ಯಕಲಾ ಕಾಲೇಜು, ದಾವಣಗೆರೆ-577004
14. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಕೇಂದ್ರ, ರಾ.ಹೆ.13, ಗುಡ್ಡದ ರಂಗವ್ವನಹಳ್ಳಿ, ಚಿತ್ರದುರ್ಗ-577502
15. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯದ ಸರ್ಕಾರಿ ಪ್ರಥಮ ದರ್ಜೆ ಘಟಕ ಕಾಲೇಜು, ತುರುವನೂರು, ಚಿತ್ರದುರ್ಗ-577517
16. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯದ ಸರ್ಕಾರಿ ಪ್ರಥಮ ದರ್ಜೆ ಘಟಕ ಕಾಲೇಜು, ಹರಿಯಬ್ಬೆ, ಚಿತ್ರದುರ್ಗ-577546
17. ಆಪ್ತ ಕಾರ್ಯಾಲಯ, ಮಾನ್ಯ ಕುಲಪತಿಗಳು/ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
18. ಕಛೇರಿ ಪ್ರತಿ.

# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ-577007

## ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:29.02.2024 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು

ಸಭೆಯಲ್ಲಿ ಹಾಜರಿದ್ದ ಸದಸ್ಯರು:

1. ಪ್ರೊ. ಬಿ.ಡಿ ಕುಂಬಾರ., ಮಾನ್ಯ ಕುಲಪತಿಗಳು : ಅಧ್ಯಕ್ಷರು
2. ಶ್ರೀಮತಿ ಶಾರದಾ ಪಾಟೀಲ, ಮಾನ್ಯ ರಾಜ್ಯಪಾಲರಿಂದ ನಾಮನಿರ್ದೇಶಿತರು : ಸದಸ್ಯರು
3. ಡಾ. ನಾಗರಾಜ ಎಸ್. ಹೆಚ್., ಪ್ರಾಚಾರ್ಯರು : ಸದಸ್ಯರು
4. ಡಾ. ಲಿಂಗರಾಜ ಪೂಜಾರ್., ಪ್ರಾಚಾರ್ಯರು : ಸದಸ್ಯರು
5. ಡಾ. ದಿವಾಕರ್ ನಾಯ್ಕ ಕೆ. ಎಸ್., ಪ್ರಾಚಾರ್ಯರು : ಸದಸ್ಯರು
6. ಶ್ರೀಮತಿ ಜಯಲಕ್ಷ್ಮಿ ಎಂ. ಆರ್., ಪ್ರಾಚಾರ್ಯರು : ಸದಸ್ಯರು
7. ಡಾ. ಗೋವಿಂದಪ್ಪ ಎಂ., ಪ್ರಾಧ್ಯಾಪಕರು : ಸದಸ್ಯರು
8. ಡಾ. ರಮೇಶ್ ಸಿ. ಕೆ., ಕುಲಸಚಿವರು (ಪರೀಕ್ಷಾಂಗ). : ಸದಸ್ಯರು
9. ಡಾ. ವೆಂಕಟರಾವ್ ಎಂ. ಪಲಾಟೆ, ಕುಲಸಚಿವರು, ಆಡಳಿತ (ಪ್ರಭಾರೆ) : ಸದಸ್ಯ ಕಾರ್ಯದರ್ಶಿ ಹಾಗೂ ಡೀನರು, ಕಲಾ ನಿಕಾಯ

ನಿಯಮಾನುಸಾರ ಕನಿಷ್ಠ ಅಗತ್ಯ ಸಂಖ್ಯೆ 08 ಕ್ಕಿಂತ ಹೆಚ್ಚು ಅಂದರೆ 09 ಸದಸ್ಯರುಗಳು ಹಾಜರಿರುವುದನ್ನು ಖಚಿತಪಡಿಸಿಕೊಂಡು ನಿಗದಿತ ಸಮಯಕ್ಕೆ ಸರಿಯಾಗಿ ಸಭೆಯನ್ನು ಪ್ರಾರಂಭಿಸಲಾಯಿತು. ಮೊದಲನೆಯದಾಗಿ ಕುಲಸಚಿವರು ಮಾನ್ಯ ಕುಲಪತಿಗಳನ್ನು ಸಭೆಗೆ ಸ್ವಾಗತಿಸಿ ಅಧ್ಯಕ್ಷತೆಯನ್ನು ವಹಿಸುವಂತೆ ಕೋರಿದರು ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿದರು. ತದನಂತರ, ಮಾನ್ಯ ಕುಲಪತಿಗಳು ವಿಶ್ವವಿದ್ಯಾನಿಲಯದ ಆಡಳಿತ ವಿಭಾಗದ ಪ್ರಭಾರೆ ಕುಲಸಚಿವರಾಗಿ ಅಧಿಕಾರ ಸ್ವೀಕರಿಸಿರುವ ಡಾ. ವೆಂಕಟರಾವ್ ಎಂ. ಪಲಾಟೆ, ಪ್ರಾಧ್ಯಾಪಕರು ಹಾಗೂ ಡೀನರು, ಕಲಾ ನಿಕಾಯ, ದಾವಣಗೆರೆ ವಿಶ್ವವಿದ್ಯಾನಿಲಯದ ಇವರನ್ನು ಹಾಗೂ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರ ವರ್ಗದಿಂದ ಜೇಷ್ಠತೆಯನುಸಾರ ಸಿಂಡಿಕೇಟ್‌ಗೆ ನಾಮನಿರ್ದೇಶಿತರಾಗಿರುವ ಡಾ. ಗೋವಿಂದಪ್ಪ ಎಂ. ಪ್ರಾಧ್ಯಾಪಕರು, ಸಸ್ಯಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ ಇವರನ್ನು ಅಭಿನಂದಿಸಿ ಸ್ವಾಗತವನ್ನು ಕೋರಿದರು. ತದನಂತರ, ಸಭೆಯ ಕಲಾಪಗಳನ್ನು ಈ ಮುಂದಿನಂತೆ ಪ್ರಾರಂಭಿಸಲಾಯಿತು.

ಕುಲಸಚಿವರು ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.01(a)/(02/24) |

## -:ಟಿಪ್ಪಣಿ:-

**ವಿಷಯ: ದಿನಾಂಕ:29.12.2023 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಅಸಾಮಾನ್ಯ ಸಭಾ ನಡಾವಳಿಗಳ ದೃಢೀಕರಣ.**

*****

ದಿನಾಂಕ:29.12.2023 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡಾವಳಿಗಳನ್ನು ದಿನಾಂಕ:09.01.2024 ರಂದು ವಿಶ್ವವಿದ್ಯಾನಿಲಯದ ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ ಕಳುಹಿಸಲಾಗಿತ್ತು. ಸದರಿ ನಡಾವಳಿಗಳ ಕುರಿತು ಇದುವರೆಗೂ ಯಾವುದೇ ಆಕ್ಷೇಪಣೆಗಳು ವಿಶ್ವವಿದ್ಯಾನಿಲಯಕ್ಕೆ ಸ್ವೀಕೃತವಾಗಿರುವುದಿಲ್ಲ. ಆದ್ದರಿಂದ, ಸದರಿ ಸಭೆಯ ನಡಾವಳಿಗಳನ್ನು ದೃಢೀಕರಿಸುವ ಸಂಬಂಧ ದಿನಾಂಕ:29.02.2024 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ದೃಢೀಕರಣಕ್ಕಾಗಿ ಸಲ್ಲಿಸಿದೆ.

### ನಿರ್ಣಯ

ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:29.12.2023 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡಾವಳಿಗಳನ್ನು ಚರ್ಚೆಗೆ ತೆಗೆದುಕೊಳ್ಳಲಾಯಿತು. ನಂತರ ನಡಾವಳಿಗಳನ್ನು ಸಭೆಯು ಒಮ್ಮತದಿಂದ ದೃಢೀಕರಿಸಿ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಪ್ರಾಧಿಕಾರ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.01(b)/(02/24) |

# -: ಟಿಪ್ಪಣಿ :-

**ವಿಷಯ: ವಿಶ್ವವಿದ್ಯಾನಿಲಯದ ವಿದ್ಯಾವಿಷಯಕ ಪರಿಷತ್ ವತಿಯಿಂದ ಒಬ್ಬ ಸದಸ್ಯರನ್ನು ಹಣಕಾಸು ಸಮಿತಿ ಸಭೆಗೆ ನಾಮನಿರ್ದೇಶನ ಮಾಡಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಕುರಿತು.**

*********

ಕರ್ನಾಟಕ ವಿಶ್ವವಿದ್ಯಾನಿಲಯಗಳ ಕಾಯ್ದೆ – 2000 ಸೆಕ್ಷನ್ 32 (1) (VI) ರನ್ವಯ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ವಿಶ್ವವಿದ್ಯಾನಿಲಯದ ವಿದ್ಯಾವಿಷಯಕ ಪರಿಷತ್ ವತಿಯಿಂದ **ಡಾ. ಸುಚಿತ್ರ ಎಸ್., ಪ್ರಾಧ್ಯಾಪಕರು, ಅರ್ಥಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ** – ಇವರನ್ನು ದಿನಾಂಕ:20.01.2024 ರಿಂದ ಅನ್ವಯವಾಗುವಂತೆ ವಿದ್ಯಾವಿಷಯಕ ಪರಿಷತ್ ಸದಸ್ಯರಾಗಿ ಇರುವವರೆಗೆ ಅಥವಾ ಮುಂದಿನ ಆದೇಶದವರೆಗೆ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ವಿಶ್ವವಿದ್ಯಾನಿಲಯದ ಹಣಕಾಸು ಸಮಿತಿ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಲಾಗಿದೆ. ಆದ್ದರಿಂದ, ಸದರಿ ವಿಷಯವನ್ನು ದಿನಾಂಕ:29.02.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಘಟನೋತ್ತರ ಅನುಮೋದನೆಗಾಗಿ ಸಲ್ಲಿಸಿದೆ.

## ನಿರ್ಣಯ

ವಿಶ್ವವಿದ್ಯಾನಿಲಯದ ವಿದ್ಯಾವಿಷಯಕ ಪರಿಷತ್ ವತಿಯಿಂದ **ಡಾ. ಸುಚಿತ್ರ ಎಸ್., ಪ್ರಾಧ್ಯಾಪಕರು, ಅರ್ಥಶಾಸ್ತ್ರ ಅಧ್ಯಯನ ವಿಭಾಗ** – ಇವರನ್ನು ದಿನಾಂಕ:20.01.2024 ರಿಂದ ಅನ್ವಯವಾಗುವಂತೆ ವಿದ್ಯಾವಿಷಯಕ ಪರಿಷತ್ ಸದಸ್ಯರಾಗಿ ಇರುವವರೆಗೆ ಅಥವಾ ಮುಂದಿನ ಆದೇಶದವರೆಗೆ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ವಿಶ್ವವಿದ್ಯಾನಿಲಯದ ಹಣಕಾಸು ಸಮಿತಿ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಿರುವುದನ್ನು ಘಟನೋತ್ತರವಾಗಿ ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಮಾ.ಸ.ನಿ. ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.02(a)/(02/24) |

# -: ಟಿಪ್ಪಣಿ :-

**ವಿಷಯಃ ವಿಶ್ವವಿದ್ಯಾನಿಲಯದ ಕುಲಸಚಿವ ಹುದ್ದೆಯ ಕರ್ತವ್ಯಗಳನ್ನು ನಿರ್ವಹಿಸಲು ತಾತ್ಕಾಲಿಕ ವ್ಯವಸ್ಥೆ ಮಾಡಿರುವ ಬಗ್ಗೆ.**

ಉಲ್ಲೇಖಃ
1. ಸರ್ಕಾರದ ಅಧಿಸೂಚನೆ ಸಂಖ್ಯೆಃ ಸಿಆಸುಇ 405 ಆಸೇವ 2023, ದಿನಾಂಕಃ 16.02.2024
2. ವಿಶ್ವವಿದ್ಯಾನಿಲಯದ ಅಧಿಸೂಚನೆ ಸಂಖ್ಯೆಃ ದಾವಿದಾ/ವಿಸಿಪಿಎಸ್/ 2023-24/54 ದಿನಾಂಕಃ 17.02.2024
3. ಮಾನ್ಯ ಕುಲಪತಿಗಳ ನಿರ್ದೇಶನ ದಿನಾಂಕಃ20.02.2024

*********

ಸರ್ಕಾರದ ಉಲ್ಲೇಖ (1)ರ ಅಧಿಸೂಚನೆಯಲ್ಲಿ ಶ್ರೀಮತಿ ಸರೋಜ ಬಿ.ಬಿ. ಕೆ.ಎ.ಎಸ್. (ಹಿ.ಶ್ರೇ) ಅಧಿಕಾರಿ, ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ ಇವರನ್ನು ಜಂಟಿ ಆಯುಕ್ತರು (ಪೂರ್ವ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿ.ಬಿ.ಎಂ.ಪಿ), ಬೆಂಗಳೂರು – ಇಲ್ಲಿಗೆ ವರ್ಗಾವಣೆ ಮಾಡಿರುತ್ತಾರೆ.

ತತ್ಸಂಬಂಧ ವಿಶ್ವವಿದ್ಯಾನಿಲಯದ ಶೈಕ್ಷಣಿಕ, ಸಂಶೋಧನೆ ಹಾಗೂ ದೈನಂದಿನ ಆಡಳಿತಾತ್ಮಕ ಕಾರ್ಯ ನಿರ್ವಹಿಸಲು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ – 2000 ಸೆಕ್ಷನ್ 20 (2)ರನ್ವಯ ಮಾನ್ಯ ಕುಲಪತಿಗಳಿಗೆ ಪ್ರದತ್ತವಾಗಿರುವ ಅಧಿಕಾರದ ಹಿನ್ನೆಲೆಯಲ್ಲಿ ಪ್ರೊ॥ ಪಲಾಟೆ ವೆಂಕಟರಾವ್ ಮಾರುತಿರಾವ್, ಪ್ರಾಧ್ಯಾಪಕರು ಹಾಗೂ ಡೀನರು, ಕಲಾ ನಿಕಾಯ – ಇವರನ್ನು ಉಲ್ಲೇಖ (2)ರಲ್ಲಿ ಅಧಿಸೂಚನೆಯಲ್ಲಿ ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಖಾಲಿ ಇರುವ ಕುಲಸಚಿವರ ಹುದ್ದೆಗೆ ತಾತ್ಕಾಲಿಕವಾಗಿ ನೇಮಕ ಮಾಡಲಾಗಿದೆ.

ಮುಂದುವರೆದು, ಉಲ್ಲೇಖ (3)ರ ಮಾನ್ಯ ಕುಲಪತಿಗಳ ನಿರ್ದೇಶಾನುಸಾರ ಈಗಾಗಲೇ ಪ್ರೊ॥ ಪಲಾಟೆ ವೆಂಕಟರಾವ್ ಮಾರುತಿರಾವ್ – ಇವರನ್ನು ತಾತ್ಕಾಲಿಕವಾಗಿ ಕುಲಸಚಿವರಾಗಿ ನೇಮಕ ಮಾಡಿರುವ ಬಗ್ಗೆ ದಿನಾಂಕಃ29.02.2024 ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಘಟನೋತ್ತರ ಅನುಮೋದನೆಗಾಗಿ ಸಲ್ಲಿಸಿದೆ.

## ನಿರ್ಣಯ

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ – 2000 ಸೆಕ್ಷನ್ 20 (2) ರನ್ವಯ ಮಾನ್ಯ ಕುಲಪತಿಗಳಿಗೆ ಪ್ರದತ್ತವಾಗಿರುವ ಅಧಿಕಾರದ ಹಿನ್ನೆಲೆಯಲ್ಲಿ ಪ್ರೊ॥ ಪಲಾಟೆ ವೆಂಕಟರಾವ್ ಮಾರುತಿರಾವ್, ಪ್ರಾಧ್ಯಾಪಕರು ಹಾಗೂ ಡೀನರು, ಕಲಾ ನಿಕಾಯ – ಇವರನ್ನು ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಖಾಲಿ ಇರುವ ಕುಲಸಚಿವರ (ಪ್ರಭಾರೆ) ಹುದ್ದೆಗೆ ತಾತ್ಕಾಲಿಕವಾಗಿ ನೇಮಕ ಮಾಡಿರುವುದನ್ನು ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಮಾ.ಸ.ನಿ. ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.02(b)/(02/24) |

# –: ಟಿಪ್ಪಣಿ :–

**ವಿಷಯ: ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದ ಕಾನೂನು ಪ್ರಕರಣಗಳನ್ನು ಇತ್ಯರ್ಥಪಡಿಸಲು ಕಾನೂನು ಸಲಹೆಗಾರರು/ ವಕೀಲರನ್ನು ನೇಮಕ ಮಾಡುವ ಕುರಿತು.**

*********

ವಿಶ್ವವಿದ್ಯಾನಿಲಯದ ಆಡಳಿತಾತ್ಮಕ ಹಾಗೂ ಇತರೆ ವಿಷಯಗಳ ಕುರಿತಂತೆ ಸ್ಥಳೀಯ ನ್ಯಾಯಾಲಯ, ಉಚ್ಚನ್ಯಾಯಾಲಯ ಹಾಗೂ ಇತರೆ ನ್ಯಾಯಾಲಯಗಳಲ್ಲಿ ದಾಖಲಾಗಿರುವ/ ದಾಖಲಾಗುವ ಪ್ರಕರಣಗಳನ್ನು ವಿಶ್ವವಿದ್ಯಾನಿಲಯದ ಪರವಾಗಿ ವಾದ ಮಂಡಿಸಿ ಇತ್ಯರ್ಥಪಡಿಸಲು ಅಥವಾ ಸೂಕ್ತ ಕ್ರಮವಹಿಸಲು 02 ಕಾನೂನು ಸಲಹೆಗಾರರು/ ವಕೀಲರನ್ನು ನೇಮಕ ಮಾಡಿಕೊಳ್ಳುವ ಸಂಬಂಧ ದಿನಾಂಕ:29.02.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

## ನಿರ್ಣಯ

ವಿಶ್ವವಿದ್ಯಾನಿಲಯದ ಆಡಳಿತಾತ್ಮಕ ಹಾಗೂ ಇತರೆ ವಿಷಯಗಳ ಕುರಿತಂತೆ ಸ್ಥಳೀಯ ನ್ಯಾಯಾಲಯ, ಉಚ್ಚನ್ಯಾಯಾಲಯ ಹಾಗೂ ಇತರೆ ನ್ಯಾಯಾಲಯಗಳಲ್ಲಿ ದಾಖಲಾಗಿರುವ/ ದಾಖಲಾಗುವ ಪ್ರಕರಣಗಳನ್ನು ವಿಶ್ವವಿದ್ಯಾನಿಲಯದ ಪರವಾಗಿ ವಾದ ಮಂಡಿಸಿ ಇತ್ಯರ್ಥಪಡಿಸಲು ಅಥವಾ ಸೂಕ್ತ ಕ್ರಮವಹಿಸಲು ಶ್ರೀ ಮಂಜುನಾಥ ಮರುಳಸಿದ್ದಪ್ಪ ಹುಲ್ಲೆರಾ, ಕಾನೂನು ಸಲಹೆಗಾರರು, ದಾವಣಗೆರೆ ಹಾಗೂ ಶ್ರೀ ಹಂಪಾಳಿ ನಾಗಮಣಿ, ಕಾನೂನು ಸಲಹೆಗಾರರು, ದಾವಣಗೆರೆ ಇವರನ್ನು ನೇಮಕ ಮಾಡಿಕೊಂಡು ಪ್ರಕರಣವಾರು ಕಾನೂನು ಶುಲ್ಕವನ್ನು ಪಾವತಿಸಲು ಸಭೆಯು ಚರ್ಚಿಸಿ ಒಮ್ಮತದಿಂದ ಅನುಮೋದಿಸಿ ಮುಂದಿನ ಕ್ರಮಕ್ಕಾಗಿ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕುಲಸಚಿವರು　　　　　　　　ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
| --- | --- |
| ವಿಷಯ ಸಂಖ್ಯೆ: | ಸಿಂ.03(a)/(02/24) |

**–ಃ ಟಿಪ್ಪಣಿ ಃ–**

**ವಿಷಯಃ ವಿಶ್ವವಿದ್ಯಾನಿಲಯದ 11ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಗೌರವ ಡಾಕ್ಟರೇಟ್ ನೀಡಲು ಘನತೆವೆತ್ತ ಮಾನ್ಯ ರಾಜ್ಯಪಾಲರಿಗೆ ಅರ್ಜಿಗಳನ್ನು ಕಳುಹಿಸುವ ಕುರಿತು.**

****

ವಿಶ್ವವಿದ್ಯಾನಿಲಯದಲ್ಲಿ ಮುಂಬರುವ ದಿನಗಳಲ್ಲಿ ಜರುಗಲಿರುವ ವಿಶ್ವವಿದ್ಯಾನಿಲಯದ 11ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದದಲ್ಲಿ ಗೌರವ ಡಾಕ್ಟರೇಟ್ ಪದವಿ ನೀಡುವ ಸಂಬಂಧ 05 (CV) ಮನವಿಗಳು ಸ್ವೀಕೃತಗೊಂಡಿದ್ದು, ಸದರಿ ಅರ್ಜಿಗಳನ್ನು ಘನತೆವೆತ್ತ ಮಾನ್ಯ ರಾಜ್ಯಪಾಲರಿಗೆ ಸಲ್ಲಿಸುವ ಸಂಬಂಧ ದಿನಾಂಕ:29.02.2024ರ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಸಲ್ಲಿಸಲಾಗಿದೆ.

**ನಿರ್ಣಯ**

ವಿಶ್ವವಿದ್ಯಾನಿಲಯದ 11 ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದದಲ್ಲಿ ಗೌರವ ಡಾಕ್ಟರೇಟ್ ಪದವಿ ನೀಡುವ ಸಂಬಂಧ ವಿಶ್ವವಿದ್ಯಾನಿಲಯಕ್ಕೆ ಸ್ವೀಕೃತಗೊಂಡ 05 (CV) ಮನವಿಗಳನ್ನು ಘನತೆವೆತ್ತ ಮಾನ್ಯ ರಾಜ್ಯಪಾಲರಿಗೆ ಕಳುಹಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.03(b)/(02/24) |

**-: ಟಿಪ್ಪಣಿ :-**

**ವಿಷಯ: ವಿಶ್ವವಿದ್ಯಾನಿಲಯದ 11ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಗೌರವ ಡಾಕ್ಟರೇಟ್ ನೀಡಲು ಘನತೆವೆತ್ತ ರಾಜ್ಯಪಾಲರು ಸಮಿತಿಯನ್ನು ರಚಿಸಬೇಕಾಗಿದ್ದು, ಸಿಂಡಿಕೇಟ್ ವತಿಯಿಂದ ಒಬ್ಬ ಪ್ರತಿನಿಧಿಯನ್ನು ಸೂಚಿಸುವ ಕುರಿತು.**

*******

ವಿಶ್ವವಿದ್ಯಾನಿಲಯದಲ್ಲಿ ಮುಂಬರುವ ದಿನಗಳಲ್ಲಿ ಜರುಗಲಿರುವ ವಿಶ್ವವಿದ್ಯಾನಿಲಯದ 11ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಘನತೆವೆತ್ತ ಮಾನ್ಯ ರಾಜ್ಯಪಾಲರು ರಚಿಸಲ್ಪಡುವ ಸಮಿತಿಗೆ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ವತಿಯಿಂದ ಒಬ್ಬ ಪ್ರತಿನಿಧಿಯನ್ನು ಆಯ್ಕೆ ಮಾಡಬೇಕಾಗಿರುವ ಕುರಿತು ದಿನಾಂಕ:29.02.2024ರ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಸಲ್ಲಿಸಲಾಗಿದೆ.

## ನಿರ್ಣಯ

ವಿಶ್ವವಿದ್ಯಾನಿಲಯದ 11ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಗೌರವ ಡಾಕ್ಟರೇಟ್ ನೀಡಲು ಘನತೆವೆತ್ತ ಮಾನ್ಯ ರಾಜ್ಯಪಾಲರು ರಚಿಸಲ್ಪಡುವ ಸಮಿತಿಗೆ ಪ್ರೊ. ಬಿ.ಜಿ. ಮೂಲಿಮನಿ, ವಿಶ್ರಾಂತ ಕುಲಪತಿಗಳು, ಗುಲ್ಬರ್ಗಾ ವಿಶ್ವವಿದ್ಯಾನಿಲಯ, ಕಲಬುರಗಿ – ಇವರನ್ನು ಸಿಂಡಿಕೇಟ್ ವತಿಯಿಂದ ಪ್ರತಿನಿಧಿಯನ್ನಾಗಿ ಆಯ್ಕೆ ಮಾಡಿ ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.03(c)/(02/24) |

## -: ಟಿಪ್ಪಣಿ :-

**ವಿಷಯ: 2023-24ನೇ ಸಾಲಿನ ಸ್ನಾತಕ/ ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ ಪರೀಕ್ಷಾ ತಂತ್ರಾಂಶ ಅಳವಡಿಸಿರುವ ಬಾಬ್ತು ರೂ.21,50,639/-ಗಳನ್ನು M/s; Logisys, Bangalore ಇವರಿಗೆ ಪಾವತಿಸಲು ಅನುಮೋದನೆ ನೀಡುವ ಕುರಿತು.**

*********

ವಿಶ್ವವಿದ್ಯಾನಿಲಯದ ಸ್ನಾತಕ/ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ, 2018-19ನೇ ಸಾಲಿನಿಂದ ಪರೀಕ್ಷಾ ಫಲಿತಾಂಶದಲ್ಲಿ ಸುಧಾರಣೆ ಹಾಗೂ ತ್ವರಿತವಾಗಿ ಫಲಿತಾಂಶವನ್ನು ನೀಡುವ ಸಲುವಾಗಿ ಇ-ಟೆಂಡರ್‌ನಲ್ಲಿ ಯಶಸ್ವಿಯಾದ ಸಂಸ್ಥೆ M/s;Logisys, Bangalore ಇವರಿಂದ ಪರೀಕ್ಷಾ ತಂತ್ರಾಂಶ ಅಳವಡಿಸಿಕೊಂಡು ಪ್ರತಿ ವಿದ್ಯಾರ್ಥಿಗೆ ರೂ.211/- ರಂತೆ 25,045- ವಿದ್ಯಾರ್ಥಿಗಳಿಗೆ ರೂ.52,84,495/- ಗಳನ್ನು ಜುಲೈ/ಆಗಸ್ಟ್-2023 ರ ಪರೀಕ್ಷಾಕಾರ್ಯ ನಿರ್ವಹಿಸಿದ ಸದರಿ ಸಂಸ್ಥೆಯಾದ M/s;Logisys, Bangalore ರವರು ಹಣ ಪಾವತಿ ಮಾಡಲು ಬಿಲ್ಲುಗಳನ್ನು ಸಲ್ಲಿಸಿರುತ್ತಾರೆ. ಬಿಲ್ಲುಗಳ ವಿವರ ಈ ಕೆಳಕಂಡಂತಿದೆ.

| ಕ್ರ.ಸಂ | ವಿವರಗಳು | ಬಿಲ್ ನಂ. | ಮೊತ್ತ | ಷರಾ |
|---|---|---|---|---|
| 1 | ಮೂರನೇ ಕಂತಿನ ಹಣ (ಶೇಕಡ 30% ರಷ್ಟು) | BN/098/23-24 | ರೂ.15,66,928-00 | ಹಣ ಪಾವತಿಸಬೇಕು |
| 2 | ನಾಲ್ಕನೇ ಕಂತಿನ ಹಣ (ಶೇಕಡ 10% ರಷ್ಟು) | BN/136/23-24 | ರೂ.5,83,711-00 | ಹಣ ಪಾವತಿಸಬೇಕು |
| | | ಒಟ್ಟು ಮೊತ್ತ : | **ರೂ.21,50,639-00** | |

ಆದ್ದರಿಂದ ಒಟ್ಟು 02 ಕಂತಿನ ಶೇಕಡ 40% ರಷ್ಟು ಹಣದ ಮೊತ್ತ ರೂ.21,50,639/- (ರೂಪಾಯಿಗಳು ಇಪ್ಪತ್ತೊಂದು ಲಕ್ಷದ ಐವತ್ತು ಸಾವಿರದ ಆರೂ ನೂರ ಮೂವತ್ತೊಂಬತ್ತು ಮಾತ್ರ) ಗಳಾಗಿರುತ್ತದೆ. ಸದರಿ ಬಿಲ್ಲುಗಳ ಮೊತ್ತವನ್ನು M/s;Logisys, Bangalore ಇವರಿಗೆ ಪಾವತಿಸಲು ದಿನಾಂಕ:29.02.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

## ನಿರ್ಣಯ

ಜುಲೈ/ ಆಗಸ್ಟ್-2023 ರ ಸ್ನಾತಕ/ ಸ್ನಾತಕೋತ್ತರ ಪದವಿ ಪರೀಕ್ಷಾ ಕಾರ್ಯ ನಿರ್ವಹಿಸಿದ ಹಾಗೂ ಇ-ಟೆಂಡರ್‌ನಲ್ಲಿ ಯಶಸ್ವಿಯಾದ ಸಂಸ್ಥೆ M/S; Logisys, Bangalore - ಇವರ **ಮೂರು ಮತ್ತು ನಾಲ್ಕನೇ ಕಂತಿನ** ಬಿಲ್ಲುಗಳನ್ನು ದಿನಾಂಕ:29.02.2024 ರ ಉಪಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ. ಸದರಿ ಬಿಲ್ಲಿನ **ಬಾಬ್ತು ರೂ.21,50,639/-** ಗಳನ್ನು **M/S;Logisys, Bangalore** - ಇವರಿಗೆ ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.03(d)/(02/24) |

## –: ಟಿಪ್ಪಣಿ :–

**ವಿಷಯ: 2023–24ನೇ ಸಾಲಿನ ಸ್ನಾತಕ/ ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ ಪರೀಕ್ಷಾ ತಂತ್ರಾಂಶ ಅಳವಡಿಸಿರುವ ಬಾಬ್ತು ರೂ.13,55,617/– ಗಳನ್ನು M/S;Unicalre Solutions Pvt. Ltd, Bangalore ಇವರಿಗೆ ಪಾವತಿಸಲು ಅನುಮೋದನೆ ನೀಡುವ ಕುರಿತು.**

*********

ವಿಶ್ವವಿದ್ಯಾನಿಲಯದ ಸ್ನಾತಕ/ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ, 2018–19ನೇ ಸಾಲಿನಿಂದ ಪರೀಕ್ಷಾ ಫಲಿತಾಂಶದಲ್ಲಿ ಸುಧಾರಣೆ ಹಾಗೂ ತ್ವರಿತವಾಗಿ ಫಲಿತಾಂಶವನ್ನು ನೀಡುವ ಸಲುವಾಗಿ ಇ–ಟೆಂಡರ್‌ನಲ್ಲಿ ಯಶಸ್ವಿಯಾದ ಸಂಸ್ಥೆ M/S;Unicalre Solutions Pvt Ltd, Bangalore ಇವರಿಂದ ಪರೀಕ್ಷಾ ತಂತ್ರಾಂಶ ಅಳವಡಿಸಿಕೊಂಡು ಪ್ರತಿ ವಿದ್ಯಾರ್ಥಿಗೆ ರೂ.211/– ರಂತೆ 25,045– ವಿದ್ಯಾರ್ಥಿಗಳಿಗೆ ರೂ.52,84,495/– ಗಳನ್ನು ಜುಲೈ/ಆಗಸ್ಟ್–2023ರ ಪರೀಕ್ಷಾ ಕಾರ್ಯ ನಿರ್ವಹಿಸಿದ ಸದರಿ ಸಂಸ್ಥೆಯಾದ M/S;Unicalre Solutions Pvt Ltd, Bangalore ರವರು ಹಣ ಪಾವತಿ ಮಾಡಲು ಬಿಲ್ಲುಗಳನ್ನು ಸಲ್ಲಿಸಿರುತ್ತಾರೆ. ಬಿಲ್ಲುಗಳ ವಿವರ ಈ ಕೆಳಕಂಡಂತಿದೆ.

| ಕ್ರ.ಸಂ | ವಿವರಗಳು | ಬಿಲ್ ನಂ. | ಮೊತ್ತ | ಷರಾ |
|---|---|---|---|---|
| 1 | ಮೂರನೇ ಕಂತಿನ ಹಣ (ಶೇಕಡ 30% ರಷ್ಟು) | BN/UC/050/23-24 | ರೂ.9,87,684–00 | ಹಣ ಪಾವತಿಸಬೇಕು |
| 2 | ನಾಲ್ಕನೇ ಕಂತಿನ ಹಣ (ಶೇಕಡ 10% ರಷ್ಟು) | BN/UC/058/23-24 | ರೂ.3,67,933–00 | ಹಣ ಪಾವತಿಸಬೇಕು |
| | | ಒಟ್ಟು ಮೊತ್ತ : | **ರೂ.13,55,617–00** | |

ಆದ್ದರಿಂದ ಒಟ್ಟು 02 ಕಂತಿನ ಶೇಕಡ 40% ರಷ್ಟು ಹಣದ ಮೊತ್ತ ರೂ.13,55,617/– (ರೂಪಾಯಿಗಳು ಹದಿಮೂರು ಲಕ್ಷದ ಐವತ್ತೈದು ಸಾವಿರದ ಆರು ನೂರ ಹದಿನೇಳು ಮಾತ್ರ) ಗಳಾಗಿರುತ್ತದೆ. ಸದರಿ ಬಿಲ್ಲುಗಳ ಮೊತ್ತವನ್ನು M/S;Unicalre Solutions Pvt Ltd, Bangalore ಇವರಿಗೆ ಪಾವತಿಸಲು ದಿನಾಂಕ:29.02.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### ನಿರ್ಣಯ

ಜುಲೈ/ ಆಗಸ್ಟ್–2023 ರ ಸ್ನಾತಕ/ ಸ್ನಾತಕೋತ್ತರ ಪದವಿ ಪರೀಕ್ಷಾ ಕಾರ್ಯ ನಿರ್ವಹಿಸಿದ ಹಾಗೂ ಇ–ಟೆಂಡರ್‌ನಲ್ಲಿ ಯಶಸ್ವಿಯಾದ ಸಂಸ್ಥೆ M/S;Unicalre Solutions Pvt Ltd, Bangalore - ಇವರ **ಮೂರು ಮತ್ತು ನಾಲ್ಕನೇ ಕಂತಿನ** ಬಿಲ್ಲುಗಳನ್ನು ದಿನಾಂಕ:29.02.2024 ರ ಉಪಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ. ಸದರಿ ಬಿಲ್ಲಿನ **ಬಾಬ್ತು ರೂ.13,55,617/– ಗಳನ್ನು M/S;Logisys, Bangalore** - ಇವರಿಗೆ ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.03(e)/(02/24) |

## -: ಟಿಪ್ಪಣಿ :-

**ವಿಷಯ: ಜನವರಿ/ ಫೆಬ್ರವರಿ-2024 ರ ಪದವಿ ಪರೀಕ್ಷೆಗಳಿಗೆ ಬೇಕಾಗುವ ಲೇಖನ/ಮುದ್ರಿತ ಸಾಮಾಗ್ರಿಗಳನ್ನು ಖರೀದಿಸಿದ ಬಾಬ್ತು ರೂ.9,84,609/- ಗಳನ್ನು Sri.Uttamchand Indira M/S.Ujeshasta Enterprises, Harapanahalli ಪಾವತಿಸಲು ಅನುಮೋದನೆ ನೀಡುವ ಕುರಿತು.**

*********

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ, ಜನವರಿ/ಫೆಬ್ರವರಿ-2024 ರ ಪದವಿ ಪರೀಕ್ಷೆಗಳಿಗೆ ಬೇಕಾದ ಲೇಖನ/ಮುದ್ರಣ ಲೇಖನ ಸಾಮಾಗ್ರಿಗಳನ್ನು ಇ-ಟೆಂಡರ್‌ನಲ್ಲಿ ಯಶಸ್ವಿಯಾದ Sri.Uttamchand Indira M/S.Ujeshasta Enterprises, Harapanahalli. ಇವರಿಂದ ಖರೀದಿಸಲಾಗಿದೆ. ಸದರಿಯವರು ರೂ:9,84,609/-(ರೂಪಾಯಿಗಳು ಒಂಬತ್ತು ಲಕ್ಷದ ಎಂಬತ್ನಾಲ್ಕು ಸಾವಿರದ ಆರು ನೂರ ಒಂಬತ್ತು ಮಾತ್ರ) ಗಳ ಬಿಲ್ಲುಗಳನ್ನು ಪಾವತಿಗಾಗಿ ಸಲ್ಲಿಸಿರುತ್ತಾರೆ. ಆದ್ದರಿಂದ, ಬಿಲ್ಲಿನ ಮೊತ್ತವನ್ನು ಪಾವತಿಸಲು ದಿನಾಂಕ:29.02.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### ನಿರ್ಣಯ

ಜನವರಿ/ ಫೆಬ್ರವರಿ-2024 ರ ಪದವಿ ಪರೀಕ್ಷೆಗಳಿಗೆ ಬೇಕಾದ ಲೇಖನ/ ಮುದ್ರಣ ಲೇಖನ ಸಾಮಾಗ್ರಿಗಳನ್ನು ಸರಬರಾಜು ಮಾಡಿದ ಬಿಲ್ಲುಗಳಿಗೆ ಸಂಬಂಧಿಸಿದಂತೆ ದಿನಾಂಕ:29.02.2024 ರ ಉಪಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ. ಸದರಿ ಬಿಲ್ಲಿನ ಬಾಬ್ತು ರೂ.9,84,609/-ಗಳನ್ನು ಇ-ಟೆಂಡರ್‌ನಲ್ಲಿ ಯಶಸ್ವಿಯಾದ ಸಂಸ್ಥೆ Sri. Uttamchand Indira M/S.Ujeshasta Enterprises, Harapanahalli - ಇವರಿಗೆ ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.03(f)/(02/24) |

## -: ಟಿಪ್ಪಣಿ :-

**ವಿಷಯ: ಜನವರಿ/ ಫೆಬ್ರವರಿ-2024 ರ ಪದವಿ ಪರೀಕ್ಷೆಗಳಿಗೆ ಬೇಕಾಗುವ ಥಿಯರಿ ಖಾಲಿ ಉತ್ತರ ಪತ್ರಿಕೆಗಳನ್ನು M/s Hitech Print Systems Limited Hydrabad ಇವರಿಂದ ಖರೀದಿಸಿದ ಬಾಬ್ತು ರೂ.73,98,000/- ಗಳನ್ನು ಪಾವತಿಸಲು ಅನುಮೋದನೆ ನೀಡುವ ಕುರಿತು.**

*********

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ, ಜನವರಿ/ ಫೆಬ್ರವರಿ-2024ರ ಪದವಿ ಪರೀಕ್ಷೆಗಳಿಗೆ ಅಗತ್ಯವಾಗಿ ಬೇಕಾದಂತಹ ಥಿಯರಿ ಪರೀಕ್ಷೆ ಖಾಲಿ ಉತ್ತರ ಪತ್ರಿಕೆಗಳನ್ನು ಖರೀದಿಸಲು ಇ-ಟೆಂಡರ್‌ನಲ್ಲಿ ಯಶಸ್ವಿಯಾದ ಸಂಸ್ಥೆ M/s Hitech Print Systems Limited Hydrabad. ಇವರಿಂದ ಖರೀದಿಸಲಾಗಿದೆ. ಸದರಿಯವರು ರೂ:73,98,000/-(ರೂಪಾಯಿಗಳು ಎಪ್ಪತ್ಮೂರು ಲಕ್ಷದ ತೊಂಬತ್ತೆಂಟು ಸಾವಿರಗಳು ಮಾತ್ರ) ಗಳ ಬಿಲ್ಲುಗಳನ್ನು ಪಾವತಿಗಾಗಿ ಸಲ್ಲಿಸಿರುತ್ತಾರೆ. ಆದ್ದರಿಂದ, ಬಿಲ್ಲಿನ ಮೊತ್ತವನ್ನು ಪಾವತಿಸಲು ದಿನಾಂಕ:29.02.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

## ನಿರ್ಣಯ

ಜನವರಿ/ ಫೆಬ್ರವರಿ-2024ರ ಪದವಿ ಪರೀಕ್ಷೆಗಳಿಗೆ ಅಗತ್ಯವಾಗಿ ಬೇಕಾದಂತಹ ಥಿಯರಿ ಪರೀಕ್ಷೆಯ ಖಾಲಿ ಉತ್ತರ ಪತ್ರಿಕೆಗಳನ್ನು ಖರೀದಿಸಲಾದ ಬಿಲ್ಲುಗಳಿಗೆ ಸಂಬಂಧಿಸಿದಂತೆ ದಿನಾಂಕ:29.02.2024 ರ ಉಪಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ. ಸದರಿ ಬಿಲ್ಲಿನ ಬಾಬ್ತು **ರೂ.73,98,000/-**ಗಳನ್ನು ಇ-ಟೆಂಡರ್‌ನಲ್ಲಿ ಯಶಸ್ವಿಯಾದ ಸಂಸ್ಥೆ M/s Hitech Print Systems Limited Hydrabad - ಇವರಿಗೆ ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.03(g)/(02/24) |

## -: ಟಿಪ್ಪಣಿ :-

ವಿಷಯಃ **ಖಾಲಿ ಘಟಿಕೋತ್ಸವ ಪದವಿ ಪ್ರಮಾಣ ಪತ್ರಗಳನ್ನು M/s Mysore Sales International Ltd. Bangalore ಇವರಿಂದ ಖರೀದಿಸಿದ ಬಾಬ್ತು ರೂ.4,55,834/- ಗಳನ್ನು ಪಾವತಿಸಲು ಅನುಮೋದನೆ ನೀಡುವ ಕುರಿತು.**

*********

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ, 11ನೇ ಘಟಿಕೋತ್ಸವದಲ್ಲಿ ಫೆಬ್ರವರಿ/ ಮಾರ್ಚ್-2023 ಮತ್ತು ಸೆಪ್ಟೆಂಬರ್/ ಅಕ್ಟೋಬರ್-2023ರಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಘಟಿಕೋತ್ಸವ ಪದವಿ ಪ್ರಮಾಣ ಪತ್ರ ನೀಡಲು ಅಗತ್ಯವಾಗಿ ಬೇಕಾದಂತಹ ಖಾಲಿ ಘಟಿಕೋತ್ಸವ ಪದವಿ ಪ್ರಮಾಣ ಪತ್ರಗಳನ್ನು ಖರೀದಿಸಿದ ಸಂಸ್ಥೆ M/s Mysore Sales International Ltd. Bangalore. ಇವರಿಂದ ಖರೀದಿಸಲಾಗಿದೆ. ಸದರಿಯವರು ರೂ:4,55,834/-(ರೂಪಾಯಿಗಳು ನಾಲ್ಕು ಲಕ್ಷದ ಐವತ್ತೈದು ಸಾವಿರದ ಎಂಟು ನೂರ ಮೂವತ್ನಾಲ್ಕು ಮಾತ್ರ) ಗಳ ಬಿಲ್ಲುಗಳನ್ನು ಪಾವತಿಗಾಗಿ ಸಲ್ಲಿಸಿರುತ್ತಾರೆ. ಆದ್ದರಿಂದ, ಬಿಲ್ಲಿನ ಮೊತ್ತವನ್ನು ದಿನಾಂಕ:29.02.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### <u>ನಿರ್ಣಯ</u>

11ನೇ ಘಟಿಕೋತ್ಸವದಲ್ಲಿ ಫೆಬ್ರವರಿ/ ಮಾರ್ಚ್-2023 & ಸೆಪ್ಟೆಂಬರ್/ ಅಕ್ಟೋಬರ್-2023ರಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಘಟಿಕೋತ್ಸವ ಪದವಿ ಪ್ರಮಾಣ ಪತ್ರ ನೀಡಲು ಅಗತ್ಯವಾಗಿ ಬೇಕಾದಂತಹ ಖಾಲಿ ಘಟಿಕೋತ್ಸವ ಪದವಿ ಪ್ರಮಾಣ ಪತ್ರಗಳನ್ನು ಖರೀದಿಸಲಾದ ಬಿಲ್ಲುಗಳಿಗೆ ಸಂಬಂಧಿಸಿದಂತೆ ದಿನಾಂಕ:29.02.2024 ರ ಉಪಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ. M/s Mysore Sales International Ltd. Bangalore ಸರ್ಕಾರಿ ಸಂಸ್ಥೆಯಾಗಿದ್ದು ಬಿಲ್ಲಿನ ಬಾಬ್ತು **ರೂ.4,55,834/-** ಗಳನ್ನು ಇವರಿಗೆ ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು                ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.03(h)/(02/24) |

## –: ಟಿಪ್ಪಣಿ :–

ವಿಷಯಃ ಲೇಖನ/ಮುದ್ರಿತ ಸಾಮಗ್ರಿಗಳನ್ನು ಖರೀದಿಸಲು **M/S.Ujeshasta Enterprises, Harapanahalli** ಇವರ ಕರಾರನ್ನು ಮುಂದುವರೆಸುವ ಬಗ್ಗೆ.

*********

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ, ಲೇಖನ/ಮುದ್ರಿತ ಲೇಖನ ಸಾಮಗ್ರಿಗಳನ್ನು ಖರೀದಿಸಲು, DU/EB/SGN/37/2022-23/3635 Date:-09-12-2022 ರ ಅನ್ವಯ ಇ–ಟೆಂಡರ್‌ನಲ್ಲಿ ಅರ್ಜಿ ಆಹ್ವಾನಿಸಿದ್ದು ಅದರಲ್ಲಿ L1 ಆಗಿ ಕಡಿಮೆ ದರ ನಮೂದಿಸಿದ ಸಂಸ್ಥೆ: M/S.Ujeshasta Enterprises, Harapanahalli, ಇವರು ಯಶಸ್ವಿಯಾಗಿರುತ್ತಾರೆ. ಇವರೊಂದಿಗೆ ದಿನಾಂಕ:10–01–2023 ರಿಂದ ದಿನಾಂಕ:09–01–2024 ರವರಗೆ ಒಂದು ವರ್ಷದ ಅವಧಿಗೆ ಕರಾರು (ಒಡಂಬಡಿಕೆ) ಮಾಡಿಕೊಳ್ಳಲಾಗಿರುತ್ತದೆ. ಪ್ರಸ್ತುತ ಕರಾರು ಅವಧಿಯು ಮುಗಿದಿರುವುದರಿಂದ 11ನೇ ಘಟಿಕೋತ್ಸವ ಮತ್ತು ಪರೀಕ್ಷಾ ಕಾರ್ಯಗಳಿಗೆ ಅಗತ್ಯವಾಗಿ ಬೇಕಾದ ಲೇಖನ ಸಾಮಗ್ರಿಗಳನ್ನು ಖರೀದಿಸಲು ದಿನಾಂಕ:10–01–2024 ರಿಂದ 6 ತಿಂಗಳ ಅವಧಿಗೆ M/S.Ujeshasta Enterprises,Harapanahalli ಇವರ ಸೇವೆಯನ್ನು ಮುಂದುವರಿಸಲು ಹಾಗೂ ಕರಾರು ಒಪ್ಪಂದ ಮಾಡಿಕೊಳ್ಳಲು ದಿನಾಂಕ:29.02.2024 ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗಾಗಿ ಮಂಡಿಸಿದೆ.

### ನಿರ್ಣಯ

11ನೇ ಘಟಿಕೋತ್ಸವ ಸಮಾರಂಭ ಹತ್ತಿರದಲ್ಲಿರುವುದರಿಂದ ಮತ್ತು ಪರೀಕ್ಷಾ ಕಾರ್ಯಗಳಿಗೆ ಅಗತ್ಯವಾಗಿ ಬೇಕಾದ ಲೇಖನ ಸಾಮಗ್ರಿಗಳನ್ನು ತುರ್ತಾಗಿ ಖರೀದಿಸಬೇಕಾಗಿರುವುದರಿಂದ M/S.Ujeshasta Enterprises, Harapanahalli ಇವರ ಸೇವೆಯನ್ನು 03 ತಿಂಗಳ ಅವಧಿಗೆ ವಿಸ್ತರಿಸಲು ಹಾಗೂ ಕರಾರು ಒಪ್ಪಂದ ಮಾಡಿಕೊಳ್ಳಲು ಸಭೆಯು ಒಮ್ಮತದಿಂದ ಅನುಮೋದಿಸಿ ಮುಂದಿನ ಕ್ರಮಕ್ಕಾಗಿ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕುಲಸಚಿವರು    ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.03(i)/(02/24) |

## -: ಟಿಪ್ಪಣಿ :-

**ವಿಷಯಃ ಅಖಿಲ ಭಾರತ ದಕ್ಷಿಣ ವಲಯ ಹಾಗೂ ರಿಪಬ್ಲಿಕ್ ಡೇ ಕ್ಯಾಂಪ್ ದೆಹಲಿಯಲ್ಲಿ ಬಾಗವಹಿಸಿದ ಕ್ರೀಡಾಪಟು/ ಅಭ್ಯರ್ಥಿಗಳಿಗೆ ಪ್ರತ್ಯೇಕ ಪರೀಕ್ಷೆ ನಡೆಸಲು ಅವಕಾಶ ನೀಡುವ ಕುರಿತು.**

*********

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ, ದಾವಣಗೆರೆ ವಿಶ್ವವಿದ್ಯಾನಿಲಯವನ್ನು ಪ್ರತಿನಿಧಿಸಿ, ಅಖಿಲಭಾರತ ದಕ್ಷಿಣವಲಯ, ರಿಪಬ್ಲಿಕ್ ಡೇ ಕ್ಯಾಂಪ್‌ನಲ್ಲಿ ಭಾಗವಹಿಸುವ ಕ್ರೀಡಾಪಟುಗಳು/ ಅಭ್ಯರ್ಥಿಗಳು ಭಾಗವಹಿಸುವಾಗ ಪ್ರತಿನಿಧಿಸುವ ವೇಳೆ ವಿಶ್ವವಿದ್ಯಾನಿಲಯ ಸೆಮಿಸ್ಟರ್ ಪರೀಕ್ಷೆಗಳು ನಡೆಯುತ್ತಿದ್ದಲ್ಲಿ ಪರೀಕ್ಷೆಗೆ ಹಾಜರಾಗಲು ಸಾಧ್ಯವಾಗದ ಕಾರಣ ಅಂತಹ ಕ್ರೀಡಾಪಟುಗಳಿಗೆ N.C.C. ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿ ಪರೀಕ್ಷೆ ನಡೆಸುವ ಸಲುವಾಗಿ ದಿನಾಂಕ:29.02.2024 ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗಾಗಿ ಮಂಡಿಸಿದೆ.

### ನಿರ್ಣಯ

ದಾವಣಗೆರೆ ವಿಶ್ವವಿದ್ಯಾನಿಲಯವನ್ನು ಪ್ರತಿನಿಧಿಸಿ, ಅಖಿಲ ಭಾರತ ದಕ್ಷಿಣ ವಲಯ, ರಿಪಬ್ಲಿಕ್ ಡೇ ಕ್ಯಾಂಪ್‌ನಲ್ಲಿ ಭಾಗವಹಿಸುವ ಕ್ರೀಡಾಪಟುಗಳು/ ಅಭ್ಯರ್ಥಿಗಳು ಕ್ರೀಡೆಯಲ್ಲಿ ಪ್ರತಿನಿಧಿಸುವ ವೇಳೆ ವಿಶ್ವವಿದ್ಯಾನಿಲಯದ ಸೆಮಿಸ್ಟರ್ ಪರೀಕ್ಷೆಗಳು ನಡೆಯುತ್ತಿದ್ದಲ್ಲಿ ಪರೀಕ್ಷೆಗೆ ಹಾಜರಾಗಲು ಸಾಧ್ಯವಾಗದ ಕ್ರೀಡಾಪಟುಗಳಿಗೆ ಹಾಗೂ N.C.C. ವಿದ್ಯಾರ್ಥಿಗಳಿಗೆ **ವಿಶೇಷ ಪ್ರಕರಣವೆಂದು ಪರಿಗಣಿಸಿ** ಪ್ರಸಕ್ತ ಸಾಲಿಗೆ ಮಾತ್ರ ಪರೀಕ್ಷೆ ನಡೆಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
| --- | --- |
| ವಿಷಯ ಸಂಖ್ಯೆ: | ಸಿಂ.03(j)/(02/24) |

## –: ಟಿಪ್ಪಣಿ :–

**ವಿಷಯ: 11ನೇ ಘಟಿಕೋತ್ಸವ ಸಮಾರಂಭದಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ವಿತರಿಸಲು ಚಿನ್ನದ ಪದಕ ಖರೀದಿಸಿದ ಬಾಬ್ತು ರೂ.3,24,000/– ಗಳ ಪಾವತಿ ಕುರಿತು.**

*********

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ 11ನೇ ಘಟಿಕೋತ್ಸವ ಸಮಾರಂಭದ ಕಾರ್ಯಕ್ರಮವು ಮಾರ್ಚ್ ಮಾಹೆಯಲ್ಲಿ ನಡೆಯಲಿರುವುದರಿಂದ ಈ ಸಮಾರಂಭದಲ್ಲಿ ಸ್ನಾತಕ/ ಸ್ನಾತಕೋತ್ತರ ಪದವಿಗಳಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಚಿನ್ನದ ಪದಕಗಳನ್ನು M/s; Suchetak Solutions, Davangere, ಇವರಿಂದ ಖರೀದಿಸಲಾಗಿದೆ. ಸದರಿ ಬಿಲ್ಲಿನ ಮೊತ್ತ ರೂ.3,24,000/– (ರೂಪಾಯಿ ಮೂರು ಲಕ್ಷದ ಇಪ್ಪತ್ನಾಲ್ಕು ಸಾವಿರ ಮಾತ್ರ)ಗಳಾಗಿರುತ್ತದೆ. ಸದರಿ ಮೊತ್ತವನ್ನು ಸಂಬಂಧಪಟ್ಟ ಸಂಸ್ಥೆಯವರಿಗೆ ಪಾವತಿಸಲು ದಿನಾಂಕ:29.02.2024 ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗಾಗಿ ಮಂಡಿಸಿದೆ.

### ನಿರ್ಣಯ

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ 11ನೇ ಘಟಿಕೋತ್ಸವ ಸಮಾರಂಭದಲ್ಲಿ ಸ್ನಾತಕ/ ಸ್ನಾತಕೋತ್ತರ ಪದವಿಗಳಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಚಿನ್ನದ ಪದಕಗಳನ್ನು ವಿತರಿಸುವ ಸಲುವಾಗಿ ಖರೀದಿಸಲಾದ ಬಿಲ್ಲುಗಳಿಗೆ ಸಂಬಂಧಿಸಿದಂತೆ ದಿನಾಂಕ:29.02.2024 ರ ಉಪಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ. ಸದರಿ ಬಿಲ್ಲಿನ ಬಾಬ್ತು **ರೂ.3,24,000/–** ಗಳನ್ನು ಇ–ಟೆಂಡರ್‌ನಲ್ಲಿ ಯಶಸ್ವಿಯಾದ ಸಂಸ್ಥೆ M/s; Suchetak Solutions, Davangere – ಇವರಿಗೆ ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಹಣಕಾಸು ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.04(a)/(02/24) |

## -: ಟಿಪ್ಪಣಿ :-

**ವಿಷಯಃ ದಿನಾಂಕ:20.01.2024 ರಂದು ಜರುಗಿದ ವಿಶ್ವವಿದ್ಯಾನಿಲಯದ 2023-24ನೇ ಸಾಲಿನ ಮೂರನೇ ಹಣಕಾಸು ಸಮಿತಿ ಸಭೆಯ ನಡಾವಳಿಗೆ ಅನುಮೋದನೆ ಕುರಿತು.**

*********

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು - ಇಲ್ಲಿ ದಿನಾಂಕ:20.01.2024 ರಂದು ಜರುಗಿದ ವಿಶ್ವವಿದ್ಯಾನಿಲಯದ 2023-24ನೇ ಆರ್ಥಿಕ ವರ್ಷದ ಮೂರನೇ ಹಣಕಾಸು ಸಮಿತಿ ಸಭೆಯಲ್ಲಿ ಚರ್ಚಿಸಿ ಕೈಗೊಂಡ ನಿರ್ಣಯಗಳ ನಡಾವಳಿಗಳನ್ನು ದಿನಾಂಕಃ29.02.2024 ರಂದು ನಡೆಯುವ ಸಿಂಡಿಕೇಟ್ ಸಾಮನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

## ನಿರ್ಣಯ

ದಿನಾಂಕ:20.01.2024 ರಂದು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರಿನಲ್ಲಿ ಜರುಗಿದ ವಿಶ್ವವಿದ್ಯಾನಿಲಯದ 2023-24 ನೇ ಸಾಲಿನ **ಮೂರನೇ ಹಣಕಾಸು ಸಮಿತಿ** ಸಭೆಯ ನಡಾವಳಿಗಳ ಕುರಿತು ಚರ್ಚಿಸಿ ನಂತರ ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.05(a)/(02/24) |

# -: ಟಿಪ್ಪಣಿ :-

**ವಿಷಯಃ ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿನ MBA ಕಟ್ಟಡದಲ್ಲಿರುವ Auditorium Wall Panel ದುರಸ್ಥಿ ಪಡಿಸುವ ಕುರಿತು.**

*********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ MBA ಕಟ್ಟಡದಲ್ಲಿರುವ Auditorium Wall Panel ಸಂಪೂರ್ಣ ಹಾಳಾಗಿದ್ದು ಅದನ್ನು ಸರಿಪಡಿಸುವುದು ಅವಶ್ಯಕವಿರುತ್ತದೆ. ಆದ್ದರಿಂದ, ಇದನ್ನು (ಅಂದಾಜು ಮೊತ್ತ ರೂ.5.00 ಲಕ್ಷ) ತುಂಡುಗುತ್ತಿಗೆ/ ದರಪಟ್ಟಿಯ ಆಧಾರದ ಮೇಲೆ ಕಾಮಗಾರಿಯನ್ನು ಕೈಗೊಳ್ಳಲು ದಿನಾಂಕಃ29.02.2024 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

## ನಿರ್ಣಯ

ದಾವಣಗೆರೆ ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿನ MBA ಕಟ್ಟಡದಲ್ಲಿರುವ Auditorium Wall Panel ಸಂಪೂರ್ಣ ಹಾಳಾಗಿರುವುದರಿಂದ ಇದನ್ನು ತುಂಡುಗುತ್ತಿಗೆ/ ದರಪಟ್ಟಿಯ ಆಧಾರದ ಮೇಲೆ ಅಂದಾಜು ಮೊತ್ತ ರೂ.5.00 ಲಕ್ಷದೊಳಗೆ ಕಾಮಗಾರಿಯನ್ನು ಕೈಗೊಳ್ಳಲು ಸಭೆಯು ಒಮ್ಮತದಿಂದ ನಿರ್ಣಯಿಸಿತು.

ಕುಲಸಚಿವರು　　　　　　　　　　ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.05(b)/(02/24) |

## –: ಟಿಪ್ಪಣಿ :–

**ವಿಷಯ: ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿ ಹೊಸದಾಗಿ ಪ್ರಾರಂಭಿಸಿರುವ MCA ಅಧ್ಯಯನ ವಿಭಾಗಕ್ಕೆ Sign Board, Notice Board, Green Board Podium & Curtain ಗಳನ್ನು ಖರೀದಿಸಿ ಅಳವಡಿಸುವ ಕುರಿತು.**

*********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಹೊಸದಾಗಿ ಪ್ರಾರಂಭಿಸಿರುವ MCA ಅಧ್ಯಯನ ವಿಭಾಗಕ್ಕೆ 02 ಸಂಖ್ಯೆ Notice Board, 02 ಸಂಖ್ಯೆ Green Board 03 ಸಂಖ್ಯೆ Podium ಹಾಗೂ Sign Board & Window Curtain ಗಳನ್ನು ಖರೀಧಿಸಿ ಅಳವಡಿಸುವಂತೆ MCA ವಿಭಾಗದ ಅಧ್ಯಕ್ಷರು ಕೋರಿರುತ್ತಾರೆ. ಆದ್ದರಿಂದ ಇವುಗಳನ್ನು ದರಪಟ್ಟಿ ಆಧಾರದ ಮೇಲೆ (ಅಂದಾಜು ಮೊತ್ತ ರೂ. 3.5 ಲಕ್ಷ) ಕೈಗೊಳ್ಳಲು ದಿನಾಂಕ:29.02.2024 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

### ನಿರ್ಣಯ

ದಾವಣಗೆರೆ ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿನ MCA ಅಧ್ಯಯನ ವಿಭಾಗಕ್ಕೆ 02 ಸಂಖ್ಯೆ Notice Board, 02 ಸಂಖ್ಯೆ Green Board, 03 ಸಂಖ್ಯೆ Podium ಹಾಗೂ Sign Board & Window Curtain ಗಳನ್ನು ನಿಯಮಾನುಸಾರ ದರಪಟ್ಟಿ ಆಧಾರದ ಮೂಲಕ ಖರೀದಿಸಲು ಸಭೆಯು ಒಮ್ಮತದಿಂದ ಅನುಮೋದಿಸಿ ಮುಂದಿನ ಕ್ರಮಕ್ಕಾಗಿ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.05(c)/(02/24) |

# -: ಟಿಪ್ಪಣಿ :-

**ವಿಷಯಃ ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿನ ಜ್ಞಾನಸೌಧ ಕಟ್ಟಡದಲ್ಲಿರುವ Server Room ಗೆ 5KVA UPS Battery ಗಳನ್ನು ಖರೀದಿಸುವ ಕುರಿತು.**

*********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಜ್ಞಾನಸೌಧ ಕಟ್ಟಡದಲ್ಲಿರುವ Server Room ಗೆ 5KVA UPS Battery ಗಳನ್ನು ಖರೀದಿಸಿಕೊಡುವಂತೆ ಕೋರಿರುತ್ತಾರೆ. ಆದ್ದರಿಂದ, ಇವುಗಳನ್ನು ದರಪಟ್ಟಿ ಆಧಾರದ ಮೇಲೆ ಕೈಗೊಳ್ಳಲು (ಅಂದಾಜು ಮೊತ್ತ: ರೂ.5.00 ಲಕ್ಷ) ದಿನಾಂಕಃ29.02.2024 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

## ನಿರ್ಣಯ

ದಾವಣಗೆರೆ ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿನ ಜ್ಞಾನಸೌಧ ಕಟ್ಟಡದಲ್ಲಿರುವ Server Room ಗೆ 5 KVA UPS Battery ಗಳನ್ನು ವಿಶ್ವವಿದ್ಯಾನಿಲಯದ ಆರ್ಥಿಕ ಲಭ್ಯತೆ ನೋಡಿಕೊಂಡು ಖರೀದಿಸಲು ಸಭೆಯು ಒಮ್ಮತದಿಂದ ನಿರ್ಣಯಿಸಿತು.

ಕುಲಸಚಿವರು ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.05(d)/(02/24) |

## -: ಟಿಪ್ಪಣಿ :-

**ವಿಷಯ: ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿನ ತುಂಗಾ ಮಹಿಳಾ ವಸತಿ ನಿಲಯಕ್ಕೆ ವಿದ್ಯುತ್ ಉಪಕರಣಗಳನ್ನು ಖರೀದಿಸಿ ಅಳವಡಿಸುವ ಕುರಿತು**

*********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ ಆವರಣದಲ್ಲಿರುವ ತುಂಗಾ ಮಹಿಳಾ ವಸತಿ ನಿಲಯಕ್ಕೆ ವಿದ್ಯುತ್ ಸಾಮಾಗ್ರಿಗಳು ಹಾಳಾಗಿದ್ದು ಅವುಗಳನ್ನು ಬದಲಾಯಿಸಿ ಮತ್ತು ರಿಪೇರಿ ಮಾಡಿಸುವ ಅವಶ್ಯಕತೆ ಇರುವುದರಿಂದ ಹೊಸದಾಗಿ ಖರೀದಿಸಿ ಅಳವಡಿಸಿರುತ್ತಾರೆ. ಆದ್ದರಿಂದ, ಈ ಕಾಮಗಾರಿಯನ್ನು ನೊಂದಾಯಿತ ಒಂದನೇ ದರ್ಜೆ ವಿದ್ಯುತ್ ಗುತ್ತಿಗೆದಾರರಿಂದ, ತುಂಡುಗುತ್ತಿಗೆ ಆಧಾರದ ಮೇಲೆ ಕೈಗೊಂಡಿದ್ದು ಇದನ್ನು (ಅಂದಾಜು ಮೊತ್ತ: ರೂ.4.79 ಲಕ್ಷ) ದಿನಾಂಕ:29.02.2024 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಘಟನೋತ್ತರ ಅನುಮೋದನೆಗೆ ಮಂಡಿಸಿದೆ.

### ನಿರ್ಣಯ

ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ ಆವರಣದಲ್ಲಿರುವ ತುಂಗಾ ಮಹಿಳಾ ವಸತಿ ನಿಲಯಕ್ಕೆ ವಿದ್ಯುತ್ ಸಾಮಾಗ್ರಿಗಳು ಹಾಳಾಗಿದ್ದರಿಂದ ಅವುಗಳನ್ನು ಬದಲಾಯಿಸಿ ಮತ್ತು ರಿಪೇರಿ ಮಾಡಿಸುವ ಹಾಗೂ ಹೊಸದಾಗಿ ಖರೀದಿಸುವ ಕಾಮಗಾರಿಯನ್ನು ನೊಂದಾಯಿತ ಒಂದನೇ ದರ್ಜೆ ವಿದ್ಯುತ್ ಗುತ್ತಿಗೆದಾರರಿಂದ ತುಂಡುಗುತ್ತಿಗೆ ಆಧಾರದ ಮೇಲೆ ರೂ.4.79 ಲಕ್ಷದೊಳಗೆ ಕಾಮಗಾರಿ ಕೈಗೊಂಡಿರುವುದನ್ನು ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.05(e)/(02/24) |

## -: ಟಿಪ್ಪಣಿ :-

**ವಿಷಯ: ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿನ ಇಂಜಿನಿಯರಿಂಗ್ ವಿಭಾಗಕ್ಕೆ Indian Council of Architecture ನಲ್ಲಿ ನೊಂದಣಿ ಹೊಂದಿರುವ Consultancy ನ್ನು ನೇಮಿಸುವ ಕುರಿತು.**

*********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ದಾವಣಗೆರೆ ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿನ ಇಂಜಿನಿಯರಿಂಗ್ ವಿಭಾಗಕ್ಕೆ Preparation of DPR, Development of Plans, Architectural Design, Building Concept & Preparation of Estimates ಈ ಎಲ್ಲಾ ಕೆಲಸಗಳಿಗೆ ವಿಶ್ವವಿದ್ಯಾನಿಲಯಕ್ಕೆ ಇ-ಟೆಂಡರ್ ಮೂಲಕ Consultancy ಸಂಸ್ಥೆಯನ್ನು ನೇಮಕ ಮಾಡಿಕೊಳ್ಳಲು ದಿನಾಂಕ:29.02.2024 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಮಂಡಿಸಿದೆ.

### ನಿರ್ಣಯ

ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿನ ಇಂಜಿನಿಯರಿಂಗ್ ವಿಭಾಗಕ್ಕೆ Preparation of DPR, Development of Plans, Architectural Design, Building Concept & Preparation of Estimates ಈ ಎಲ್ಲಾ ಕೆಲಸಗಳಿಗೆ ವಿಶ್ವವಿದ್ಯಾನಿಲಯಕ್ಕೆ Indian Council of Architecture ನಲ್ಲಿ ನೊಂದಣಿ ಹೊಂದಿರುವ Consultancy ಸಂಸ್ಥೆಯನ್ನು ಇ-ಟೆಂಡರ್ ಮೂಲಕ ನೇಮಕ ಮಾಡಿಕೊಳ್ಳಲು ಸಭೆಯು ಒಮ್ಮತದಿಂದ ನಿರ್ಣಯಿಸಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
| --- | --- |
| ವಿಷಯ ಸಂಖ್ಯೆ: | ಸಿಂ.05(f)/(02/24) |

## -: ಟಿಪ್ಪಣಿ :-

**ವಿಷಯಃ ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿನ ಪರೀಕ್ಷಾಂಗ ವಿಭಾಗಕ್ಕೆ ಗೌಪ್ಯತೆ ಕಾಪಾಡಲು ಹೆಚ್ಚುವರಿಯಾಗಿ IP Camera ಗಳನ್ನು ಅಳವಡಿಸುವ ಕುರಿತು.**

*********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ ಆವರಣದಲ್ಲಿನ ಪರೀಕ್ಷಾಂಗ ವಿಭಾಗದ ಕಛೇರಿಯಲ್ಲಿರುವ ಕೊಠಡಿಗಳಲ್ಲಿ ಸಿಬ್ಬಂದಿಗಳಿಗೆ ಗೌಪ್ಯತೆ ಕಾಪಾಡಲು ಹೆಚ್ಚುವರಿಯಾಗಿ IP-Camera ಗಳನ್ನು ಅಳವಡಿಸಿಕೊಡುವಂತೆ ಕುಲಸಚಿವರು (ಪರೀಕ್ಷಾಂಗ) ಇವರು ಕೋರಿರುತ್ತಾರೆ. ಆದ್ದರಿಂದ, ಇವುಗಳನ್ನು ದರಪಟ್ಟಿ ಆಧಾರದ ಮೇಲೆ ಕೈಗೊಳ್ಳಲು (ಅಂದಾಜು ಮೊತ್ತ: ರೂ.5.00 ಲಕ್ಷ.) ದಿನಾಂಕಃ29.02.2024 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಮಂಡಿಸಿದೆ.

### ನಿರ್ಣಯ

ದಾವಣಗೆರೆ ವಿಶ್ವವಿದ್ಯಾನಿಲಯದ ಪರೀಕ್ಷಾಂಗ ವಿಭಾಗದ ಕಛೇರಿಯಲ್ಲಿನ ಕೊಠಡಿಗಳಲ್ಲಿ ಸಿಬ್ಬಂದಿಗಳಿಗೆ ಗೌಪ್ಯತೆ ಕಾಪಾಡಲು ತುರ್ತಾಗಿ IP-Camera ಗಳನ್ನು ಅಳವಡಿಸುವ ಕಾಮಗಾರಿಯನ್ನು ದರಪಟ್ಟಿ ಆಧಾರದ ಮೇಲೆ ಕೈಗೊಳ್ಳಲು ಸಭೆಯು ಒಮ್ಮತದಿಂದ ನಿರ್ಣಯಿಸಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.05(g)/(02/24) |

## -: ಟಿಪ್ಪಣಿ :-

ವಿಷಯಃ ಮಾನ್ಯ ಕುಲಪತಿಗಳ ಅಧಿಕೃತ ನಿವಾಸದ ಆವರಣದಲ್ಲಿ ಕಾರ್ ಪಾರ್ಕಿಂಗ್ ನಿರ್ಮಾಣ ಮಾಡುವ ಕುರಿತು.

*********

ದಾವಣಗೆರೆ ವಿಶ್ವವಿದ್ಯಾನಿಲಯ ವ್ಯಾಪ್ತಿಗೆ ಬರುವ ದೃಶ್ಯಕಲಾ ಮಹಾವಿದ್ಯಾಲಯ ಆವರಣದಲ್ಲಿನ ಮಾನ್ಯ ಕುಲಪತಿಗಳ ವಸತಿ ಗೃಹಕ್ಕೆ ವಿಶ್ವವಿದ್ಯಾನಿಲಯದ ಶಾಸನಬದ್ಧ ಅಧಿಕಾರಿಗಳ ಕಾರು ನಿಲುಗಡೆಗೆ ಸುಸಜ್ಜಿತವಾದ ಕಾರ್‌ಪಾರ್ಕಿಂಗ್ ನಿರ್ಮಾಣ ಮಾಡುವ ಕುರಿತು ಮುಂಗಡ ಠೇವಣಿ ವಂತಿಕೆ ಆದಾರದ ಮೇಲೆ ನಿರ್ಮಿತಿ ಕೇಂದ್ರ, ದಾವಣಗೆರೆ ಮುಖಾಂತರ ನಿರ್ವಹಿಸುವ ಕುರಿತು (ಅಂದಾಜು ಮೊತ್ತ:25.00 ಲಕ್ಷ) ದಿನಾಂಕಃ29.02.2024 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಮಂಡಿಸಿದೆ.

### ನಿರ್ಣಯ

ದಾವಣಗೆರೆ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳ ವಸತಿ ಗೃಹದಲ್ಲಿ ವಿಶ್ವವಿದ್ಯಾನಿಲಯದ ಶಾಸನಬದ್ಧ ಅಧಿಕಾರಿಗಳ ಕಾರುಗಳ ನಿಲುಗಡೆಗೆ ಸುಸಜ್ಜಿತವಾದ ಕಾರ್ ಶೆಡ್ ನಿರ್ಮಾಣ ಮಾಡಲು (ಅಂದಾಜು ಮೊತ್ತ ರೂ.25.00 ಲಕ್ಷ) ಮುಂಗಡ ಠೇವಣಿ ವಂತಿಕೆ ಆಧಾರದ ಮೇಲೆ ನಿರ್ಮಿತಿ ಕೇಂದ್ರ, ದಾವಣಗೆರೆ ಇವರ ಮುಖಾಂತರ ನಿರ್ವಹಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಶೈಕ್ಷಣಿಕ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.06(a)/(02/24) |

## -: ಟಿಪ್ಪಣಿ :-

**ವಿಷಯ: 2023-24ನೇ ಶೈಕ್ಷಣಿಕ ಸಾಲಿನ ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳ/ಸ್ನಾತಕೋತ್ತರ ಕಾಲೇಜುಗಳಿಗೆ ಹೆಚ್ಚುವರಿ ಸೀಟುಗಳ ಪ್ರವೇಶಕ್ಕೆ ಘಟನೋತ್ತರವಾಗಿ ಅನುಮತಿ ನೀಡಿರುವ ಬಗ್ಗೆ.**

*********

2023-24ನೇ ಶೈಕ್ಷಣಿಕ ಸಾಲಿನ ವಿವಿಧ ಸ್ನಾತಕೋತ್ತರ ಪದವಿಗಳ ಪ್ರವೇಶಾತಿಗೆ ಸಂಬಂಧಿಸಿದಂತೆ - ವಿಶ್ವವಿದ್ಯಾನಿಲಯದ ಮುಖ್ಯ ಆವರಣದಲ್ಲಿರುವ ಅರ್ಥಶಾಸ್ತ್ರ ಅಧ್ಯಯನ ವಿಭಾಗದ ಹಾಗೂ ವಿಶ್ವವಿದ್ಯಾನಿಲಯ ವ್ಯಾಪ್ತಿಯ ಈ ಕೆಳಕಂಡ ಸ್ನಾತಕೋತ್ತರ ಕಾಲೇಜುಗಳ ಪ್ರಾಂಶುಪಾಲರುಗಳು ಸಲ್ಲಿಸಿರುವ ಕೋರಿಕೆ ಮೇರೆಗೆ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಹೆಚ್ಚುವರಿ ಸೀಟುಗಳ ಪ್ರವೇಶಾತಿಗೆ ಅನುಮೋದಿಸುವಂತೆ ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ಪ್ರವೇಶಾತಿಗೆ ಅನುಮತಿಸಲಾಗಿದೆ. ಸದರಿ ವಿಷಯವನ್ನು **ದಿನಾಂಕ:22.12.2023ರಂದು ನಡೆದ ವಿದ್ಯಾವಿಷಯಕ ಪರಿಷತ್ತು ಸಭೆಯಲ್ಲಿ ಮಂಡಿಸಿ ಘಟನೋತ್ತರ ಅನುಮೋದನೆ ಪಡೆಯಲಾಗಿದೆ.**

**ಈ ಪ್ರವೇಶ ಮಿತಿಯು 2023-24ನೇ ಶೈಕ್ಷಣಿಕ ಸಾಲಿಗೆ ಮಾತ್ರ ಅನ್ವಯಿಸುತ್ತದೆಂದು ಸೂಚಿಸಲಾಗಿದೆ.**

| ಕ್ರ. ಸಂ. | ಸ್ನಾತಕೋತ್ತರ ವಿಭಾಗ/ ಕಾಲೇಜಿನ ವಿವರ | ನಿಗದಿತ ಪ್ರವೇಶ ಮಿತಿ | ಹೆಚ್ಚುವರಿ ಸೀಟುಗಳು | ಒಟ್ಟು |
|---|---|---|---|---|
| 1 | ಸ್ನಾತಕೋತ್ತರ ಅರ್ಥಶಾಸ್ತ್ರ ವಿಭಾಗ, ಶಿವಗಂಗೋತ್ರಿ, ದಾವಣಗೆರೆ ವಿಶ್ವವಿದ್ಯಾನಿಲಯ. | 43 | 03 | 46 |
| 2 | ಎ.ಆರ್.ಎಂ. ಪ್ರಥಮ ದರ್ಜೆ ಕಾಲೇಜು & ಪಿ.ಜಿ.ಸೆಂಟರ್, ದಾವಣಗೆರೆ - ವಾಣಿಜ್ಯಶಾಸ್ತ್ರ | 30 | 05 | 35 |
| 3 | ಹೆಚ್.ಪಿ.ಪಿ.ಸಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಳ್ಳಕೆರೆ. - ವಾಣಿಜ್ಯಶಾಸ್ತ್ರ | 40 | 10 | 50 |

| ಕ್ರ. ಸಂ. | ಸ್ನಾತಕೋತ್ತರ ವಿಭಾಗ/ ಕಾಲೇಜಿನ ವಿವರ | ನಿಗದಿತ ಪ್ರವೇಶ ಮಿತಿ (OU) | ಹೆಚ್ಚುವರಿ ಸೀಟುಗಳು (OU) | ಒಟ್ಟು |
|---|---|---|---|---|
| 1 | ಹೆಚ್.ಪಿ.ಪಿ.ಸಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಳ್ಳಕೆರೆ. - ಸಮಾಜಶಾಸ್ತ್ರ | 01 | 02 | 03 |
| 2 | ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ. | 02 | 03 | 05 |

ಸದರಿ ವಿಷಯವನ್ನು ದಿನಾಂಕ:29.02.2024ರಂದು ನಡೆಯಲಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಘಟನೋತ್ತರ ಅನುಮೋದನೆಗಾಗಿ ಸಲ್ಲಿಸಿದೆ.

**ನಿರ್ಣಯ**

2023-24ನೇ ಶೈಕ್ಷಣಿಕ ಸಾಲಿನ ವಿವಿಧ ಸ್ನಾತಕೋತ್ತರ ಪದವಿಗಳ ಪ್ರವೇಶಾತಿಗೆ ಸಂಬಂಧಿಸಿದಂತೆ ಈ ಮೇಲ್ಕಂಡ ವಿಶ್ವವಿದ್ಯಾನಿಲಯದ ಮುಖ್ಯ ಆವರಣದಲ್ಲಿರುವ ಅರ್ಥಶಾಸ್ತ್ರ ಅಧ್ಯಯನ ವಿಭಾಗ ಹಾಗೂ ಸ್ನಾತಕೋತ್ತರ ಕಾಲೇಜುಗಳ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಹೆಚ್ಚುವರಿ ಸೀಟುಗಳನ್ನು ಸದರಿ ಶೈಕ್ಷಣಿಕ ಸಾಲಿಗೆ ಅನ್ವಯಿಸುವಂತೆ ಮಾತ್ರ ಹೆಚ್ಚುವರಿ ಸೀಟು ನೀಡಿರುವುದಕ್ಕೆ ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಶೈಕ್ಷಣಿಕ ವಿಭಾಗ | |
|---|---|
| ವಿಷಯ ಸಂಖ್ಯೆ: | ಶಿಂ.06(b)/(02/24) |

## -: ಟಿಪ್ಪಣಿ :-

**ವಿಷಯ:** **2023-24ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಎಂ.ಸಿ.ಎ. ಪದವಿಯ ಪ್ರವೇಶ ಶುಲ್ಕದ ಕುರಿತು.**

ಉಲ್ಲೇಖ: 1. ಸರ್ಕಾರದ ಪತ್ರ ಸಂ: ಇಡಿ 283 ಯುಎನ್ಇ 2022 ಬೆಂಗಳೂರು ದಿನಾಂಕ:08.08.2023.

2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:30.01.2024.

*********

ಸರ್ಕಾರದ ಉಲ್ಲೇಖಿತ(1)ರ ಪತ್ರದನುಸಾರ - ವಿಶ್ವವಿದ್ಯಾನಿಲಯದಲ್ಲಿ 2023-24ನೇ ಶೈಕ್ಷಣಿಕ ಸಾಲಿನಿಂದ AICTE ವತಿಯಿಂದ ಅನುಮೋದನೆ ಪಡೆದು ನೂತನವಾಗಿ Master of Computer Application (MCA) ಕೋರ್ಸ್‌ನ್ನು ಪ್ರಾರಂಭಿಸಲಾಗಿದೆ. ಪ್ರಸ್ತುತ ಸದರಿ ಕೋರ್ಸಿನ 2023-24ನೇ ಶೈಕ್ಷಣಿಕ ಸಾಲಿನ ಪ್ರಥಮ ವರ್ಷದ ಪ್ರವೇಶ ಶುಲ್ಕ ತಃಖ್ತೆಯನ್ನು ಉಲ್ಲೇಖ (2)ರ ಮಾನ್ಯ ಕುಲಪತಿಗಳ ಆದೇಶಾನುಸಾರ ಈ ಕೆಳಕಂಡಂತೆ ಸಿದ್ಧಪಡಿಸಲಾಗಿದ್ದು, ಯಥಾವತ್ತಾಗಿ ಪಾವತಿಸಿಕೊಳ್ಳಲು ಆದೇಶಿಸಲಾಗಿದೆ.

### :2023-24 ಶೈಕ್ಷಣಿಕ ಸಾಲಿನ ಶುಲ್ಕದ ವಿವರ:

| (I Year MCA SEAT FEES)FOR PGCET STUDENTS | | | |
|---|---|---|---|
| Sl. No. | FEES DETAILS | SC/ST(Rs.) | Others(Rs.) |
| 1 | ADMISSION FEE | 15000 | 15000 |
| 2 | TUTION FEE | 31560 | 31560 |
| 3 | LABORATORY FEE | 8050 | 8050 |
| 4 | LIBRARY FEE | 2000 | 2000 |
| 5 | GYMKHANA FEE | 550 | 550 |
| 6 | COURSE DEVELOPMENT FEE | 3000 | 3000 |
| 7 | MEDICAL EXAMINATION FEE | 150 | 150 |
| 8 | REGISTRATION FEE | 2000 | 2000 |
| 9 | SPORTS FEE | 200 | 200 |
| 10 | STUDENT WELFARE FUND | 140 | 140 |
| 11 | TEACHER WELFARE FUND | 165 | 165 |
| 12 | READER ALLOWANCE | 300 | 300 |
| 13 | TRANSFER CERTIFICATE FEE | 715 | 715 |
| 14 | STUDY CERTIFICATE FEE | 50 | 50 |
| 15 | NSS FEE | 160 | 160 |
| 16 | ID CARD FEE | 55 | 55 |
| 17 | SPORTS DEVELOPMENT FEE | 242 | 242 |
| 18 | SOFTSKILLS DEVELOPMENT FEE | 1000 | 1000 |
| 19 | MEDICAL FEE | 200 | 200 |
| 20 | EDUCATION TECHNOLOGY | 937 | 937 |
| 21 | RED CROSS | 50 | 50 |
| 22 | UNIVERSITY PLACEMENT FEE | 250 | 250 |
| | | **66774** | **66774** |

ಪು.ತಿ.ನೊ.

ಕುಲಸಚಿವರು

ಕುಲಪತಿಗಳು

| (I Year MCA FEES) FOR UNFILLED PGCET SEATS | | | |
|---|---|---|---|
| Sl. No. | FEES DETAILS | SC/ST(Rs.) | Others(Rs.) |
| 1 | ADMISSION FEE | 15000 | 15000 |
| 2 | TUTION FEE | 31560 | 31560 |
| 3 | LABORATORY FEE | 8050 | 8050 |
| 4 | LIBRARY FEE | 2000 | 2000 |
| 5 | GYMKHANA FEE | 550 | 550 |
| 6 | COURSE DEVELOPMENT FEE | 3000 | 3000 |
| 7 | MEDICAL EXAMINATION FEE | 150 | 150 |
| 8 | REGISTRATION FEE | 2000 | 2000 |
| 9 | SPORTS FEE | 200 | 200 |
| 10 | STUDENT WELFARE FUND | 140 | 140 |
| 11 | TEACHER WELFARE FUND | 165 | 165 |
| 12 | READER ALLOWANCE | 300 | 300 |
| 13 | TRANSFER CERTIFICATE FEE | 715 | 715 |
| 14 | STUDY CERTIFICATE FEE | 50 | 50 |
| 15 | NSS FEE | 160 | 160 |
| 16 | ID CARD FEE | 55 | 55 |
| 17 | SPORTS DEVELOPMENT FEE | 242 | 242 |
| 18 | SOFTSKILLS DEVELOPMENT FEE | 1000 | 1000 |
| 19 | MEDICAL FEE | 200 | 200 |
| 20 | EDUCATION TECHNOLOGY | 937 | 937 |
| 21 | RED CROSS | 50 | 50 |
| 22 | UNIVERSITY PLACEMENT FEE | 250 | 250 |
| 23 | UNIVERSITY DEVELOPMENT FEE | 15000 | 15000 |
| | | **81774** | **81774** |

ಸದರಿ 2023-24ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಗೊಂಡಿರುವ ಸ್ನಾತಕೋತ್ತರ ಎಂ.ಸಿ.ಎ., ಪದವಿ ಪ್ರಥಮ ವರ್ಷದ ಶುಲ್ಕ ತಃಖ್ತೆಯನ್ನು ದಿನಾಂಕಃ29.02.2024 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಘಟನೋತ್ತರವಾಗಿ ಅನುಮೋದನೆಗಾಗಿ ಸಲ್ಲಿಸಿದೆ.

## ನಿರ್ಣಯ

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ 2023-24ನೇ ಶೈಕ್ಷಣಿಕ ಸಾಲಿನಿಂದ AICTE ವತಿಯಿಂದ ಅನುಮೋದನೆ ಪಡೆದು ನೂತನವಾಗಿ ಪ್ರಾರಂಭಿಸಿರುವ Master of Computer Application (MCA) ಕೋರ್ಸಿನ ಪ್ರಥಮ ವರ್ಷದ ಪ್ರವೇಶ ಶುಲ್ಕ ತಃಖ್ತೆಯನ್ನು ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು | ಕುಲಪತಿಗಳು

| ಶೈಕ್ಷಣಿಕ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.06(c)/(02/24) |

## –: ಟಿಪ್ಪಣಿ :–

ವಿಷಯಃ **2023–24ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಎಂ.ಬಿ.ಎ. ಪದವಿಯ ಪ್ರಥಮ ಹಾಗೂ ದ್ವಿತೀಯ ವರ್ಷದ ಪ್ರವೇಶ ಶುಲ್ಕದ ಅನುಮೋದನೆ ಕುರಿತು.**

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕಃ29.01.2024.

*********

ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಆಡಳಿತ ನಿರ್ವಹಣಾಶಾಸ್ತ್ರ ಅಧ್ಯಯನ ವಿಭಾಗದ 2023–24ನೇ ಶೈಕ್ಷಣಿಕ ಸಾಲಿನ ಪ್ರಥಮ ಹಾಗೂ ದ್ವಿತೀಯ ವರ್ಷದ (ಪ್ರಸುತ್ತ ಮೂರನೇ ಸೆಮಿಸ್ಟರ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ) ಪ್ರವೇಶ ಶುಲ್ಕ ತಃಖ್ತೆಯನ್ನು ಸಿದ್ದಪಡಿಸಲಾಗಿದ್ದು, ಯಥಾವತ್ತಾಗಿ ಅನುಸರಿಸಲು ಮಾನ್ಯ ಕುಲಪತಿಗಳ ಆದೇಶಿಸಿರುವ ಹಿನ್ನಲೆಯಲ್ಲಿ ಈ ಕೆಳಕಂಡಂತೆ ಪಾವತಿಸಿಕೊಳ್ಳಲು ಆದೇಶಿಸಲಾಗಿದೆ.

**:2023–24 ಶೈಕ್ಷಣಿಕ ಸಾಲಿನ ಪ್ರಥಮ ಹಾಗೂ ದ್ವಿತೀಯ ವರ್ಷದ ಶುಲ್ಕದ ವಿವರ:**

| MBA FEES FOR PGCET STUDENTS | | | | | |
|---|---|---|---|---|---|
| SL. NO. | FEES DETAILS | FIRST YEAR | | SECOND YEAR (For present 3rd semester students) | |
| | | SC/ST/C1 (Rs.) | Others (Rs.) | SC/ST/C1 (Rs.) | Others (Rs.) |
| 1 | ADMISSION FEE | 5832 | 5832 | 5832 | 5832 |
| 2 | TUTION FEE | 31560 | 31560 | 31310 | 31310 |
| 4 | LIBRARY FEE | 880 | 880 | 880 | 880 |
| 5 | GYMKHANA FEE | 550 | 550 | 550 | 550 |
| 6 | DEVELOPMENT FEE | 1850 | 1850 | 1850 | 1850 |
| 7 | MEDICAL EXAMINATION FEE | 171 | 171 | 171 | 171 |
| 8 | REGISTRATION FEE | 2000 | 2000 | 2000 | 2000 |
| 9 | SPORTS FEE | 220 | 220 | 220 | 220 |
| 10 | STUDENT WELFARE FUND | 140 | 140 | 140 | 140 |
| 11 | TEACHER WELFARE FUND | 165 | 165 | 165 | 165 |
| 12 | READER ALLOWANCE | 303 | 303 | 303 | 303 |
| 13 | TRANSFER CERTIFICATE FEE | 715 | 715 | 715 | 715 |
| 14 | STUDY CERTIFICATE FEE | 50 | 50 | 50 | 50 |
| 15 | NSS FEE | 160 | 160 | 160 | 160 |
| 16 | ID CARD FEE | 55 | 55 | 55 | 55 |
| 17 | SPORTS DEVELOPMENT FEE | 242 | 242 | 242 | 242 |
| 18 | SOFTSKILLS DEVELOPMENT FEE | 1039 | 1039 | 1039 | 1039 |
| 19 | MEDICAL FEE | 200 | 200 | 200 | 200 |
| 20 | EDUCATION TECHNOLOGY | 990 | 990 | 990 | 990 |
| 21 | RED CROSS | 50 | 50 | 50 | 50 |
| 22 | UNIVERSITY PLACEMENT FEE | 250 | 250 | 250 | 250 |
| | **TOTAL** | **47422** | **47422** | **47172** | **47172** |

ಸದರಿ 2023–24ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಎಂ.ಬಿ.ಎ., ಪದವಿಯ ಪ್ರಥಮ ಹಾಗೂ ದ್ವಿತೀಯ ವರ್ಷದ (ಪ್ರಸುತ್ತ ಮೂರನೇ ಸೆಮಿಸ್ಟರ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ) ಶುಲ್ಕ ತಃಖ್ತೆಯನ್ನು ದಿನಾಂಕಃ29.02.2024 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಘಟನೋತ್ತರ ಅನುಮೋದನೆಗಾಗಿ ಸಲ್ಲಿಸಿದೆ.

**ನಿರ್ಣಯ**

ದಾವಣಗೆರೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಆಡಳಿತ ನಿರ್ವಹಣಾಶಾಸ್ತ್ರ ಅಧ್ಯಯನ ವಿಭಾಗದ 2023–24ನೇ ಶೈಕ್ಷಣಿಕ ಸಾಲಿನ ಪ್ರಥಮ ಹಾಗೂ ದ್ವಿತೀಯ ವರ್ಷದ (ಪ್ರಸುತ್ತ ಮೂರನೇ ಸೆಮಿಸ್ಟರ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ) ನಿಗಧಿಪಡಿಸಿರುವ ಪ್ರವೇಶ ಶುಲ್ಕ ತಃಖ್ತೆಯನ್ನು ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಶೈಕ್ಷಣಿಕ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.06(d)/(02/24) |

## -: ಟಿಪ್ಪಣಿ :-

ವಿಷಯ: ದಾವಣಗೆರೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಪದವಿಯ **M.Sc. Zoology** ವಿಷಯದಲ್ಲಿ ಅತೀ ಹೆಚ್ಚು ಅಂಕ ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗೆ **"Prof. Shakunthala W/o Gurusiddaiah N.J., Former Principal"** ಇವರ ಹೆಸರಿನಲ್ಲಿ ಸ್ವರ್ಣ ಪದಕವನ್ನು ಸ್ಥಾಪನೆ ಮಾಡುವ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಯಲ್ಲಿ ಅನುಮೋದಿಸುವ ಕುರಿತು.

******

2023-24ನೇ ಶೈಕ್ಷಣಿಕ ಸಾಲಿಗೆ ಅನ್ವಯವಾಗುವಂತೆ ಸ್ವರ್ಣ ಪದಕ ದೇಣಿಗೆ ನೀಡಿರುವ ದಾನಿಗಳ ವಿವರಗಳು ಈ ಕೆಳಗಿನಂತಿವೆ.

| Sl. No. | Name of the Donor | Amount DD /Ch.No./ Date | In the Name of | Subject which related to |
|---|---|---|---|---|
| 1 | **Prof. Shakunthala** W/o Gurusiddaiah N.J., Former Principal of D.R.M. Science College, Davangere, #868/1, Shankar Vihar Extension, P.B. Road, Davangere-577006. | **Rs.1,00,000/-** Ch. No:055252 04.01.2024 Rs.10,000/- Ch.No. 055253 04.01.2024 Total:1,10,000/- | Sree Mallikarjuna Charitable Trust. Prof. Shakunthala W/o Gurusiddaiah N.J. | 1. First Rank holder in M.Sc zoology subject. 2. If tie - University Decision is Final. |

ಮೇಲ್ಕಂಡ ಸ್ವರ್ಣ ಪದಕ ದಾನಿಗಳು ಹಾಗೂ ಸದರಿಯವರು ಆಯ್ಕೆ ಮಾಡಿಕೊಂಡಿರುವ ಸ್ವರ್ಣ ಪದಕ ದಾನದ ವಿಷಯದ ವಿವರಗಳನ್ನು ದಿನಾಂಕ:29.02.2024 ರ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

### ನಿರ್ಣಯ

ದಾವಣಗೆರೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗದ ವಿಷಯದಲ್ಲಿ ಅತೀ ಹೆಚ್ಚು ಅಂಕ ಪಡೆದು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗೆ **"Sree Mallikarjuna Charitable Trust. Prof. Shakunthala W/o Gurusiddaiah N.J."** ಇವರ ಹೆಸರಿನಲ್ಲಿ ಸ್ವರ್ಣ ಪದಕವನ್ನು ಸ್ಥಾಪನೆ ಮಾಡಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು ಕುಲಪತಿಗಳು

| ಕ್ರೀಡಾ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.07(a)/(12/23) |

# -: ಟಿಪ್ಪಣಿ :-

**ವಿಷಯಃ ವಿಶ್ವವಿದ್ಯಾನಿಲಯದ ಕ್ರೀಡಾ ಸಲಹಾ ಸಮಿತಿಯ ನಡಾವಳಿಗಳನ್ನು ಅನುಮೋದಿಸುವ ಕುರಿತು.**

*********

ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:17.01.2024 ರಂದು 2023-24ನೇ ಸಾಲಿನ ವಿಶ್ವವಿದ್ಯಾನಿಲಯ ಕ್ರೀಡಾ ಸಲಹಾ ಸಮಿತಿ ಸಭೆಯನ್ನು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿತ್ತು. ಸದರಿ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಲಾದ ವಿಷಯಗಳ ನಡಾವಳಿಗಳನ್ನು ಅನುಮೋದಿಸುವ ಕುರಿತು ದಿನಾಂಕ:29.02.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

**ನಿರ್ಣಯ**

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:17.01.2024 ರಂದು ಏರ್ಪಡಿಸಲಾಗಿದ್ದ 2023-24ನೇ ಸಾಲಿನ ವಿಶ್ವವಿದ್ಯಾನಿಲಯದ ಕ್ರೀಡಾ ಸಲಹಾ ಸಮಿತಿ ಸಭೆಯ ನಡಾವಳಿಗಳನ್ನು ಕುರಿತು ಚರ್ಚಿಸಿ ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು　　　　　　　　ಕುಲಪತಿಗಳು

| ಪ.ಜಾತಿ & ಪ.ಪಂಗಡ ಘಟಕ | |
|---|---|
| ವಿಷಯ ಸಂಖ್ಯೆ: | ಸಿಂ.08(a)/(12/23) |

## -: ಟಿಪ್ಪಣಿ :-

**ವಿಷಯಃ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿ ಅಭಿವೃದ್ಧಿ ಘಟಕದ ಸಲಹಾ ಸಮಿತಿ ಸಭೆಯ ನಡಾವಳಿಗಳನ್ನು ಅನುಮೋದಿಸುವ ಕುರಿತು.**

*********

ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:05.02.2024 ರಂದು 2023-24ನೇ ಸಾಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿ ಅಭಿವೃದ್ಧಿ ಘಟಕದ ಸಲಹಾ ಸಮಿತಿ ಸಭೆಯನ್ನು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿತ್ತು, ಸದರಿ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಲಾದ ವಿಷಯಗಳ ನಡಾವಳಿಗಳನ್ನು ಅನುಮೋದಿಸುವ ಕುರಿತು ದಿನಾಂಕ:29.02.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

<u>ನಿರ್ಣಯ</u>

ದಾವಣಗೆರೆ ವಿಶ್ವವಿದ್ಯಾನಿಲಯದ ಪ.ಜಾತಿ & ಪ.ಪಂಗಡ ಘಟಕದ ವತಿಯಿಂದ ದಿನಾಂಕ:17.01.2024 ರಂದು ಏರ್ಪಡಿಸಲಾಗಿದ್ದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿ ಅಭಿವೃದ್ಧಿ ಘಟಕದ ಸಲಹಾ ಸಮಿತಿಯ ನಡಾವಳಿಗಳ ಕುರಿತು ಚರ್ಚಿಸಿ ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು          ಕುಲಪತಿಗಳು

| ಅಭಿವೃದ್ಧಿ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.09(a)/(12/23) |

# -: ಟಿಪ್ಪಣಿ :-

ವಿಷಯಃ ವಿಶ್ವವಿದ್ಯಾನಿಲಯದ ವಿವಿಧ ಅಧ್ಯಯನ ವಿಭಾಗಗಳಿಗೆ ಪೀಠೋಪಕರಣ/ ಯಂತ್ರೋಪಕರಣಗಳನ್ನು ಖರೀದಿಸುವ ಕುರಿತು.

*********

ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಳ ಕಚೇರಿ ಹಾಗೂ ಮಹಿಳಾ ವಸತಿ ನಿಲಯಗಳಿಗೆ ಅವಶ್ಯವಿರುವ ಈ ಕೆಳಕಂಡ ಪೀಠೋಪಕರಣ/ ಯಂತ್ರೋಪಕರಣಗಳನ್ನು ನಿಯಮಾನುಸಾರ ಖರೀದಿಸಲು ದಿನಾಂಕ:29.02.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

| Sl.No | Particulars | Quantity |
|---|---|---|
| 1 | Stand Fan | 05 Nos |
| 2 | Office Table | 35 Nos |
| 3 | Office Chair | 12 Nos |
| 4 | Dinner Tabels Big (Ladies Hostel) | 10 Nos |
| 5 | Dinner Bench Big (Ladies Hostel) | 10 Nos |
| 6 | Dubble Bunker Cot (Ladies Hostel) | 57 Nos |

## ನಿರ್ಣಯ

ದಾವಣಗೆರೆ ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಳ ಕಚೇರಿ ಹಾಗೂ ಮಹಿಳಾ ವಸತಿ ನಿಲಯಗಳಿಗೆ ಅವಶ್ಯವಿರುವ ಈ ಮೇಲ್ಕಂಡ ಪೀಠೋಪಕರಣ/ ಯಂತ್ರೋಪಕರಣಗಳನ್ನು Government e Marketplace (GeM) ಮೂಲಕ ಖರೀದಿಸಲು ಸಭೆಯು ಒಮ್ಮತದಿಂದ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕೊನೆಯಲ್ಲಿ ಕುಲಸಚಿವರ(ಆಡಳಿತ) ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು

ಕುಲಪತಿಗಳು